# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XXIV - 9    ಸೆಪ್ಟೆಂಬರ್ 2004

### ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಷನ್‌ನಲ್ಲಿ : | | |
| ಶ್ರೀ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರ ಭಾವ - ಭಕ್ತಿ ಸಂಗಮದ ಗಾಯನ | ● ನಾಗಭೂಷಣ | 2 |
| Forthcoming Programmes | | 3 |
| ಪುಸ್ತಕ ಬಿಡುಗಡೆ : | | |
| ಗೀತಾ ವಿಶ್ವನಾಥ್ ಅವರ 'ಎಲೆ ಮರೆಯ ಹಣ್ಣುಗಳು' | | 4 |
| ಕವನ : | | |
| ಭಾಗವತರು ಮತ್ತು ಊರ ರಾಜಕೀಯ | ● ಶ್ರೀನಿವಾಸ ಜೋಕಟ್ಟೆ | 4 |
| ಮಾಸ್ತಿ ಜೀವನ ಸಾಧನೆ | ● ಮಹೇಶ ಹೆಗ್ಡೆ | 5 |
| ಗಾಂಧೀವಾದಿ ಶತಾಯುಷಿ ನಿಟ್ಟೂರರಿಗೆ ನಮನ | ● ನಾಗಭೂಷಣ | 6 |
| ಕವನ : | | |
| ನಾನು ಮಣ್ಣಾದಾಗ | ● ಡಾ. ಫ್ಲೇವಿಯಾ | 7 |
| ಶಿಕ್ಷಣ - ಮಾಧ್ಯಮ | ● ಸುಮಾ ದ್ವಾರಕಾನಾಥ್ | 8 |
| ಕತೆ : | | |
| ರಂಗನ ಮದುವೆ (ಮಾಸ್ತಿಯವರ ಸಣ್ಣಕತೆಗಳ ಸಂಗ್ರಹದಿಂದ) | | 10 |
| ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಪತ್ರಿಕಾ ಮಾಧ್ಯಮಗಳ ಪಾತ್ರ | ● ಸುಮಾ ದ್ವಾರಕಾನಾಥ್ | 13 |
| ಸುತ್ತಮುತ್ತ | | 15 |


**Rs. 5/-**

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 ● Grams: "KARUNADU"

ಅಸೋಸಿಯೇಶನ್‌ನಲ್ಲಿ

# ಶ್ರೀ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರ ಭಾವ - ಭಕ್ತಿ ಸಂಗಮದ ಗಾಯನ

ಮೈಸೂರು ಅಸೋಸಿಯೇಷನ್ ಆಶ್ರಯದಲ್ಲಿ ಶನಿವಾರ, 21-8-2004ರಂದು ಏರ್ಪಡಿಸಿದ ಕಾಸರಗೋಡಿನ ಶ್ರೀ ಎಡನೀರು ಮಠಾಧೀಶ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳ ಕರ್ನಾಟಕ ಸಂಗೀತ ಕಚೇರಿಯು ಭಾವ ಮತ್ತು ಭಕ್ತಿಗಳಿಂದ ಕೂಡಿದ್ದು ಎಲ್ಲಾ ವರ್ಗದ ರಸಿಕರ ಮೆಚ್ಚುಗೆ ಪಡೆಯುವಲ್ಲಿ ಯಶಸ್ವಿಯಾಯಿತು.




*ಶನಿವಾರ, 21-8-2004ರಂದು ನಡೆದ ಕರ್ನಾಟಕ ಸಂಗೀತ ಕಾರ್ಯಕ್ರಮದಲ್ಲಿ ಎಡನೀರು ಮಠದ ಸ್ವಾಮಿಗಳಾದ ಶ್ರೀ ಶ್ರೀ ಕೇಶವಾನಂದ ಭಾರತಿ ಸ್ವಾಮಿಗಳು ಮತ್ತು ಸಂಗಡಿಗರು.*

ಶ್ರೀ ಸ್ವಾಮಿಜೀಯವರು ತಮ್ಮ ಸ್ವರಚಿತ ಕೃತಿ ವಕ್ರತುಂಡಂಭಜೆ (ಹಂಸ ಧ್ವನಿ)ಯಿಂದ ತಮ್ಮ ಕಚೇರಿಯನ್ನು ಆರಂಭಿಸಿದರು. ಶ್ರೀ ಪುರಂದರದಾಸರ ''ಹರಿ ಕುಣಿದ ನಮ್ಮ ಹರಿ ಕುಣಿದ'' (ಆಭೇರಿ) ಭಾವ ಪೂರ್ಣವಾಗಿ ಮೂಡಿ ಬಂತು. ಮತ್ತೊಂದು ಸ್ವಂತ ರಚನೆಯ ಕೃತಿ ''ಶಂಭೋ ಗಿರೀಶ'' (ಪಂತುವರಾಳಿ). ಸದಾಶಿವ ಬ್ರಹ್ಮೇಂದ್ರರ ''ಪಿಬರೇ ರಾಮರಸಂ'' (ಯಮನ್)ಗಳನ್ನು ಹಾಡಿ ಪುರಂದರದಾಸರ ''ಅಲ್ಲಿದೆ ನಮ್ಮ ಮನೆ'' (ಮಾಂಡ್) ಸಾದರ ಪಡಿಸಿ ರಸಿಕರ ಮೆಚ್ಚುಗೆಗಳಿಸಿದರು. ಪುರಂದರ ದಾಸರ ''ನೀನ್ಯಾಕೋ ನಿನ್ನ ಹಂಗ್ಯಾಕೋ'' (ರಾಮ ಮಾಲಿಕೆ) ಸ್ವಾಮೀಜಿಯವರು ರಂಜಕರಾಗಗಳಲ್ಲಿ ಹಾಡಿದರು. ಕಬೀರ್‌ದಾಸರ ''ರಾಮಜಪೋ'' (ಬೃಂದಾವನ ಸಾರಂಗ) ಭಕ್ತಿ ರಸಪೂರ್ವಕವಾಗಿ ಮೂಡಿಬಂತು. ತಮ್ಮ ಸ್ವರಚಿತ ಮಲೆಯಾಳಂ ಕೃತಿ ಕೃಷ್ಣಾ ಗುರುವಾಯೂರಪ್ಪ'' (ಕಲ್ಯಾಣ - ವಸಂತ) ಪರಿಣಾಮಕಾರಿಯಾಗಿ · ಸಾದರ ಪಡಿಸಿ ತಮಗೆ ಮಲೆಯಾಳಂ ಭಾಷೆಯ ಮೇಲೂ ಪ್ರಭುತ್ವವಿದೆಯೆಂದು ತೋರ್ಪಡಿಸಿದರು. ತಮ್ಮ ಮತ್ತೊಂದು ಸ್ವಂತ ರಚನೆ ''ಶ್ರೀ ರಾಮಚಂದಿರನೆ''ಯನ್ನು ಹಾಡಿ ತಾವೇ ರಚಿಸಿದ ಎಡನೀರು ಪುರದೈವದ ಮಂಗಳಾಚರಣೆಯೊಂದಿಗೆ ಕಾರ್ಯಕ್ರಮ ಸಂಪನ್ನಮಾಡಿದರು.

ಉತ್ತಮ ಶರೀರ ವಿವಿಧ ಭಾಷೆಗಳ ಸುಲಲಿತ ಸಂಗೀತ ಸಂಚಾರದ ಸ್ವರಚಿತ ಕೃತಿಗಳ ರಚನೆ, ಇಂಪಾದ ರಾಗಾಲಾಪನೆ, ಸ್ಪಷ್ಟ ಸಾಹಿತ್ಯ ವಿನ್ಯಾಸದ ವಿದ್ವತ್ಪೂರ್ಣ ನೆರವಲ್‌ಗಳನ್ನು ಸಾದರ ಪಡಿಸಿದುದು, ಇವೆಲ್ಲವೂ ಸ್ವಾಮೀಜಿಯವರ ಸಂಗೀತ, ಸಾಹಿತ್ಯ ಭಾಷಾ ಪಾಂಡಿತ್ಯಕ್ಕೆ ಸಾಕ್ಷಿಯಾಗಿದ್ದುವು. ಮಂಗಳೂರಿನ ಆಕಾಶವಾಣಿಯ ಹಿರಿ ಕಲಾವಿದರ ಶ್ರೀ ಟಿ. ಜಿ. ಗೋಪಾಲಕೃಷ್ಣನ್ ಪಿಟೀಲಿನಲ್ಲಿ, ವಿದ್ವಾನ್ ಶಂಕರನಾರಾಯಣನ್ ಮೃದಂಗದಲ್ಲಿ, ಶೇಖರ್ ಘಟಂನಲ್ಲಿ ಉತ್ತಮ ಮನೋಧರ್ಮದಿಂದ ಸಹಕರಿಸಿದುದು ಕಚೇರಿ ಕಳೆಗಟ್ಟುವಲ್ಲಿ ಯಶಸ್ವಿಯಾಯಿತು.

ಆರಂಭದದಲ್ಲಿ ಅಸೋಸಿಯೇಶನ್ ಗೌ. ಕೋಶಾಧಿಕಾರಿ ಶ್ರೀ ವಸಂತ್ ಸ್ವಾಮೀಜಿ ಮತ್ತು ಕಲಾವಿದರುಗಳಿಗೆ ಪುಷ್ಪ ಗೌರವ ನೀಡಿ ಸ್ವಾಗತಿಸಿದರು. ಶ್ರೀ ನಾಗಭೂಷಣ್ ಸ್ವಾಮೀಜಿ ಹಾಗೂ ಕಲಾವಿದರುಗಳನ್ನು ಪರಿಚಯಿಸಿ ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದ ನಂತರ ಸ್ವಾಮೀಜಿಯವರು ಎಲ್ಲರಿಗೂ ಫಲ ಮಂತ್ರಾಕ್ಷತೆಯಿತ್ತು ಆಶೀರ್ವದಿಸಿದರು.

- ನಾಗಭೂಷಣ



On Friday, 20-8-2004 at 7.00 p.m. a Carnatic vocal concert was presented by Sri Girish, (grand son of Sangeetha Kalanidhi Smt. T. Brinda) at Mysore Association ground floor hall. He was well accompanied by Sri Ambika Prasad, (deciple of Nagai Murali) on the violin and giving extremely good support and making the concert a grand success. With him playing mridangam was Sri B. Sivaraman, disciple of thanjavur K. Murthy.
It was a memorable evening. Sri Girish sang with all his expertise and the descerning audience was all appreciative. He was presented a bouquet and a memento by Shri Vasant ob behalf of Mysore Association.

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For INDIAN AIRLINES & JET AIRLINES

2/16, KABBUR HOUSE,
SION (E), MUMBAI-400 022.
PHONES : 2407 2984*2409 3573
2407 7750

## *Some of the forthcoming attractions !!!*

**In October :**

An Advanced Workshop on The rare compositions of Mysore **Sadashiva Rao**

*Conducted by*
**Dr. T. S. Satyavati**
From 3rd October to 12th October 2004

**In November :**

An Advanced Workshop on The rare compositions of Karnataka Sangeetha Pitamaha

**Sri. Purandara Dasa & Sri. Swati Tirunal**

*Conducted by*
**Vidwan R. K. Srikantan**
From 18th November to 28th November 2004

Course Fee : Rs. 300/- for each workshop per participant

Concessional Fee : Rs.500/- only, for those who register for both the Workshops before 30th September 2004.

Specially recommended for Music Teachers and Senior Music Students

**HURRY UP !**
**REGISTER YOUR NAMES TODAY!**
**CONTACT OFFICE FOR REGISTRATION !**

## FORTH COMING PROGRAMMES

| Sr.No. | Date | Programme | Time | Venue |
|---|---|---|---|---|
| 1 | 8th to 11th Sep. 04 | The Mysore Association, Bombay & IPTA Presents Inter Collegiate Drama Competition | 5.00p.m. | Auditorium |
| 2 | 14th Sep.04 | Ganesha pooja & Sahasranaamaarchana | 7.00p.m. | Ground floor. |
| 3 | 17th Sep. 04 | Commencement of Shree Swarna Gowri & Shri Mahaganapathi Pooja - 2004 | | |
| | | - Shri Swarna Gowri Pooja | 10.30 a.m. | |
| | | - Mahamangalarathi8.00 p.m. | Ground floor | |
| 4 | 18th Sep. 04 | - Shri. Mahaganapathi prathishtapane & pooja | 10.30 a.m. | Ground floor |
| | | - Mahamangalarathi8.00 p.m. | | |
| 5 | 19th Sep. 04 | - Shri Swarna Gowri & Shri Mahaganapathi pooja | 9.00 a.m. | Ground floor |
| | | - Bhajan by **Ms. Laxmi Parthasarathy & Group** | 7.00 p.m. | Conf. Hall |
| | | - Pooja & Mahamangalarathi | 9.00 p.m. | Ground floor |
| 6 | 20th Sep. 04 | - Shri Swarna Gowri & Shri Mahaganapathi pooja | 9.00 a.m. | Ground floor |
| | | - Bhajan by **Sriranjini Group** | 7.00 p.m. | Conf. Hall |
| | | - Pooja & Mahamangalarathi | 9.00 p.m. | Ground floor |
| 7 | 21st Sep. 04 | - Shri Swarna Gowri & Shri Mahaganapathi pooja | 9.00 a.m. | Ground floor |
| | | **Commencement of Music Festival of Young & Upcoming Artists** | | |
| | | **Kum. - Aparna Kannan** Carnatic-Vocal | 7.00 p.m. | Conf. Hall |
| | | Kum. Savitha Vishwanathan - Violin | | |
| | | Sri. Aditya Rajagopalan - Mridangam | | |
| | | - Pooja & Mahamangalarathi | 9.00 p.m. | Ground floor |
| 8 | 22nd Sep. 04 | - Shri Swarna Gowri & Shri Mahaganapathi pooja | 9.00 a.m. | Ground floor |
| | | **Kum. Soumya Raghava Ratna** - Carnatic Vocal and Kum. Aruna Duvvuri | 7.00 p.m. | Conf. Hall |
| | | Kum. Smrithi Sunderajan - Violin | | |
| | | Shri. Devanand - Mridangam | | |
| | | - Pooja & Mahamangalarathi | 9.00 p.m. | Ground floor |
| 9 | 23rd Sep. 04 | - Shri Swarna Gowri & Shri Mahaganapathi pooja | 9.00 a.m. | Ground floor |
| | | **Sri. N. D. Vijay Kumar** - Carnatic Vocal | 7.00 p.m. | Conf. Hall |
| | | Kum. Smrithi Sunderajan - Violin | | |
| | | Shri. Harish Tyagarajan - Mridangam | | |
| | | - Pooja & Mahamangalarathi | 9.00 p.m. | Ground floor |
| 10 | 24th Sep. 04 | - Shri Swarna Gowri & Shri Mahaganapathi pooja | 9.00 a.m. | Ground floor |
| | | **Sri. N. Subramaniyam** - Carnatic Vocal | 7.00 p.m. | Conf. Hall |
| | | Sri. Anujan Krishnamoorthy - Violin | | |
| | | Sri. Badri - Mridangam | | |
| | | - Pooja & Mahamangalarathi | 9.00 p.m. | Ground floor |
| 11 | 25th Sep. 04 | - Shri Swarna Gowri & Shri Mahaganapathi pooja | 9.00 a.m. | Ground floor |
| | | **Kum. B. N. Chinmayee** - Carnatic Vocal | 7.00 p.m. | Conf. Hall |
| | | Sri. L. Ramakrishnan - Violin | | |
| | | Sri. Rohit Prasad - Mridangam | | |
| | | - Pooja & Mahamangalarathi | 9.00 p.m. | Ground floor |
| 12 | 26th Sep. 04 | - Shri Swarna Gowri & Shri Mahaganapathi pooja | 9.00 a.m. | Ground floor |
| | | - Veda Ghosha by Vaidikas of Shankara Matt | 10.00 a.m. | |
| | | Devotional Songs by **Smt. Chandrika Bhatt Group** | 11.00 a.m. | Ground floor |
| | | - Pooja & Mahamangalarathi, Visarjane | | |
| | | - Procession of Shri Swarna Gowri & Shri Ganapathi to Dadar Beach for immersion | 12.00 noon | Ground floor |
| | | - Prasada Vinayoga | | |
| 13 | 28th Sep. 04 | Ganesha pooja & Sahasranaamaarchana | 7.00p.m. | Ground floor. |
| 14 | 1st Oct. 04 | Sankashti Ganesha Pooja & Sahasranaamaarchana | | |
| 15 | 5th Oct. 04 | Ganesha pooja & Sahasranaamaarchana | 7.00p.m. | Ground floor. |

ಪುಸ್ತಕ ಬಿಡುಗಡೆ

# ಗೀತಾ ವಿಶ್ವನಾಥ್ ಅವರ 'ಎಲೆ ಮರೆಯ ಹಣ್ಣುಗಳು'

ಶ್ರೀಮತಿ ಗೀತಾ ವಿಶ್ವನಾಥ್ ಅವರು ಅಸೋಸಿಯೇಷನ್‌ನ ಒಬ್ಬ ಹಳೆಯ ಸದಸ್ಯೆ. ಅಸೋಸಿಯೇಶನ್ ಕಲಾ ವಿಭಾಗದ ಸಕ್ರಿಯ ಕಾರ್ಯಕರ್ತರಾಗಿದ್ದರು. ಹೆಸರಾಂತ ನೃತ್ಯಗಾರ್ತಿ. ಅಸೋಸಿಯೇಷನ್‌ನ ಕಲಾ ತಂಡಕ್ಕಾಗಿ ಅನೇಕ ನೃತ್ಯ ನಾಟಕಗಳ ಕಾರ್ಯಕ್ರಮಗಳನ್ನು ನೀಡಿದ್ದಾರೆ. ನೃತ್ಯ ರೂಪಕಗಳನ್ನು, ನಾಟಕಗಳನ್ನೂ ಬರೆದು ಅಳವಡಿಸಿ ಆಡಿಸಿದ್ದಾರೆ. ಅವರ ಶ್ಯಾಮಲಾ ದಂಡಕ, ಅಂತಃಪುರ ಗೀತೆಗಳು ಮೊದಲಾದ ನೃತ್ಯ ರೂಪಕಗಳು ಬಹಳ ಮೆಚ್ಚುಗೆಯನ್ನು ಗಳಿಸಿದ್ದವು. ಮುದ್ರಾರಾಕ್ಷಸ, ವಿಗಡ ವಿಕ್ರಮ ರಾಯ, ವಿದ್ಯಾಭ್ಯಾಸ ಮೊದಲಾದ ನಾಟಕಗಳನ್ನು ಅವರು ದಿಗ್ದರ್ಶಿಸಿದ್ದರು. ಒಳ್ಳೆಯ ಸಮಾಜ ಕಾರ್ಯಕರ್ತೆಕೂಡ. ಈಗ ಬೆಂಗಳೂರಿನಲ್ಲಿ ನೆಲೆಸಿರುವರು. ''ಎಲೆ ಮರೆಯ ಹಣ್ಣುಗಳು'' ಅವರು ಬರೆದ ಹಾಗೂ ಪುಸ್ತಕರೂಪದಲ್ಲಿ ಪ್ರಕಾಶಿತವಾದ ಮೊದಲ ಕಥಾ ಸಂಗ್ರಹ. ಈ ಪುಸ್ತಕದ ಬಿಡುಗಡೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು. ಅದರ ವರದಿ ಬೆಂಗಳೂರು ವಿಜಯ ಪತ್ರಿಕೆಯಲ್ಲಿ ಬಂದಿದ್ದನ್ನು ಇಲ್ಲಿ ಅಸೋಸಿಯೇಷನ್ ಸದಸ್ಯರಿಗಾಗಿ ಪುನರ್ ಮುದ್ರಿಸಿದ್ದೇವೆ.

ಹೆಸರಾಂತ ಲೇಖಕ ವ್ಯಾಸರಾಯ ಬಲ್ಲಾಳ ಅವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ, ನಾಟ್ಯ ಪ್ರವೀಣೆ ಗೀತಾ ವಿಶ್ವನಾಥ್ ಅವರ 'ಎಲೆ ಮರೆಯ ಹಣ್ಣುಗಳು' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಇಂದಿನ ಸಾಮಾಜಿಕ ಬದಲಾವಣೆಗಳಿಂದಾಗಿ ಮಕ್ಕಳಿದ್ದರೂ ವೃದ್ಧರು ಕೊನೆಗಾಲದಲ್ಲಿ ಅನಿವಾರ್ಯವಾಗಿ ಒಂಟಿಯಾಗಿ ಜೀವಿಸಬೇಕಾಗಿದೆ. ಮಕ್ಕಳು ದೂರ ಮಾಡಿದ್ದನ್ನೇ ವೃದ್ಧ ತಂದೆ ತಾಯಿಗಳು ಸಹಿಸುವುದು ಕಷ್ಟ. ಈಗ ಪಾತಕಿಗಳು ಇವರ ಬೆನ್ನತ್ತಿ ಕೊಲೆ ಗೈಯುತ್ತಿರುವುದು ಆತಂಕ ಮೂಡಿಸಿದೆ. ವರ್ಷವೊಂದರಲ್ಲಿ ಬೆಂಗಳೂರಿನಲ್ಲೇ 50 ಕೊಲೆಯಾಗಿರುವ ವಿಷಯ ಬೆಳಕಿಗೆ ಬಂದಿದೆ. ಇದು ನಗರದಲ್ಲಿ ವೃದ್ಧರ ಜೀವನ ಅಭದ್ರಸ್ಥಿತಿ ತಲುಪಿರುವುದನ್ನು ಸ್ಪಷ್ಟಪಡಿಸುತ್ತದೆ ಎಂದು ಹೇಳಿದರು.

ಇಂಥ ಸಂದರ್ಭದಲ್ಲಿ ಬದುಕಿನ ಮುಸ್ಸಂಜೆಯಲ್ಲಿರುವ ಸ್ತ್ರೀಯರ ಸಂವೇದನೆ ಬಗ್ಗೆ ಗೀತಾ ಅವರು ಪುಸ್ತಕ ಬರೆದಿರುವುದು ಅಭಿನಂದನೀಯ. 'ಎಲೆ ಮರೆಯ ಹಣ್ಣುಗಳು', ಎಲ್ಲಿಯೂ ಬೌದ್ಧಿಕ ಅಹಂಕಾರ ಪ್ರದರ್ಶಿಸದೆ ಸರಳವಾಗಿ ಓದಿಸಿಕೊಂಡು ಹೋಗುವ ಕೃತಿ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ವ್ಯಕ್ತಿ ಚಿತ್ರಗಳನ್ನು ಆದರಿಸಿದ ಕೃತಿ ಇದಾದರೂ, ಲೇಖಕಿ ಹತ್ತಿರದಿಂದ ನೋಡಿದ ಸಂಗತಿಗಳನ್ನು ಸೂಕ್ಷ್ಮವಾಗಿ ಬರವಣಿಗೆಗಿಳಿಸಿದ್ದಾರೆ. ಮಹಿಳೆಯ ಹೋರಾಟದ ಬದುಕಿನ ಬಗ್ಗೆ ಹಾಗೂ ಕುಟುಂಬದ ಘರ್ಷಣೆಯ ಸಂದರ್ಭಗಳಲ್ಲಿ ಮಹಿಳೆ ಎಂತಹ ಮಹತ್ವದ ಪಾತ್ರ ನಿಭಾಯಿಸುತ್ತಾಳೆ ಎಂಬುದನ್ನು ನವಿರಾಗಿ ಬಿಂಬಿಸಲಾಗಿದೆ ಎಂದು ಕೃತಿ ಪರಿಚಯ ಮಾಡಿದ ಲೇಖಕಿ ಎಚ್. ಎಸ್. ಪಾರ್ವತಿ ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಆರಂಭದಲ್ಲಿ ಶ್ರೀಮತಿ ಗೀತಾ ಅವರ ಮಕ್ಕಳಾದ ಶಾರ್ವರಿ ಹಾಗೂ ಶ್ರುತಾ ಪ್ರಾರ್ಥನಾ ಗೀತೆಯನ್ನು ಹಾಡಿದರು.

ಕೃತಿ ರಚಿಸಿದ ಗೀತಾ ವಿಶ್ವನಾಥ್ ಸ್ವಾಗತಿಸಿ, ವಂದಿಸಿದರು. ನವಕರ್ನಾಟಕ ಪ್ರಕಾಶನದ ರಾಜಾರಾಮ್ ಹಾಜರಿದ್ದರು.



ವ್ಯಾಸರಾಯ ಬಲ್ಲಾಳರು ಗೀತಾ ವಿಶ್ವನಾಥ್ ಅವರ 'ಎಲೆಮರೆಯ ಹಣ್ಣುಗಳು' ಪುಸ್ತಕ ಬಿಡುಗಡೆ ಮಾಡುತ್ತಿರುವುದು.

## ಭಾಗವತರು ಮತ್ತು ಊರ ರಾಜಕೀಯ

ನಮ್ಮೂರ ರಾಜಕೀಯವನ್ನು ಪರಿಚಯಿಸುವುದು ಅಂದರೆ
ಯಕ್ಷಗಾನದಲ್ಲಿ ಬರುವ
ನಡುರಾತ್ರಿ ಭಾಗವತರ ಸುದ್ದಿಗೆ ಕೈ ಹಾಕಿದಂತೆ
ನಡುರಾತ್ರಿ ಪ್ರವೇಶಿಸುವ ಭಾಗವತರು
ಪ್ರಧಾನ ಭಾಗ
ವತರೆಂದು ಪ್ರೇಕ್ಷಕರ ನಂಬಿಕೆ
ಹಾಗೆಂದು -
ಕೈಮುಗಿದುಕೊಂಡೇ ಅವರು ಒಳ ಬರುವುದು
ನಮಸ್ಕಾರ ಸಿಕ್ಕಿದ ತಕ್ಷಣ ಪ್ರೇಕ್ಷಕರು ಚಪ್ಪಾಳೆ ತಟ್ಟುವುದು
ಯಕ್ಷಗಾನದ ನೆನಪು

ಬನ್ನಿ ನಮ್ಮೂರ ರಾಜಕೀಯಕ್ಕೆ
ಆರಂಭದಲ್ಲಿದ್ದವರು ಮತ್ತು
ಅದನ್ನು ಮುಗಿಸುವವರು ಬೇರೆ ಬೇರೆ ಜನ
ಎರಡನೇ ಭಾಗವತರು ಕಾಲಿಡುವಾಗ
ಕೆಲವರಿಗೆ ತೂಕಡಿಕೆ ನಿಜ
ನಮ್ಮೂರ ರಾಜಕೀಯದಲ್ಲೂ ಹಾಗೆಯೇ
ನಡು ನಡುವೆ ತೂಕಡಿಸುವವರು ತುಂಬಾ ಜನ
ಎಂತಹ ಚೆಂಡೆ ಮದ್ದಳೆಯ ಪೆಟ್ಟಿಗೂ
ಏಳದ ಕುಂಭಕರ್ಣ ನಿದ್ರೆಯ ಮತದಾರರು
ಅಲ್ಲಿ -
ಬಗೆ ಬಗೆಯ ವೇಷಗಳಿಗೆ ಭಾಗವತರ ವಿವಿಧ ಸ್ವರಗಳು
ನಮ್ಮೂರಲ್ಲಿ -
ಅದಕ್ಕಿಂತಲೂ ಜೋರಾಗಿ ಸರಿಗಮದ ಭಾಷಣಗಳು,
ಪರಂಪರೆಯದ್ದೇ ಪ್ರತಾಪಗಳು

ಭಾಗವತರು ಕೂತಲ್ಲಿಯೇ ನಿರ್ಧರಿಸುತ್ತಾರೆ ಅಲ್ಲಿ -
''ಪ್ರಸಂಗ''ವನ್ನು ಎಷ್ಟು ಗಂಟೆಗೆ ಮುಗಿಸಬೇಕೆಂದು
ಓಡಿಸುತ್ತಾರೆ ವೇಷಗಳನ್ನು,
ಮಾತನಾಡುತ್ತಿರುವವರನ್ನು ಸುತ್ತು ಹಾಕಿಸುತ್ತಾರೆ
ಮತ್ತೆ ಕುಣಿಸುತ್ತಾರೆ !
ಆದರೆ ನಮ್ಮೂರ ರಾಜಕೀಯದಲ್ಲಿ ಹೀಗಿಲ್ಲ
ಕೂತಲ್ಲಿಯೇ ಏನನ್ನೂ ನಿರ್ಧರಿಸುವುದಕ್ಕಾಗುವುದಿಲ್ಲ
ಏನು ಬದಲಾಯಿಸಬೇಕಾದರೂ
ಎಲ್ಲಕ್ಕೂ ಮೇಲಿನಿಂದಲೇ ಉತ್ತರ ಬರಬೇಕು
ಬರುವ ತನಕ ಕಾಯಬೇಕು
ಕಾಯುವುದು, ನಿರೀಕ್ಷಿಸುವುದು, ಜೊಲ್ಲು ಸುರಿಸುವುದು
ಭಾರತೀಯ ಪರಂಪರೆ !

ಈಗ
ರಾಜಕೀಯದಲ್ಲಿ ಯಕ್ಷಗಾನದಲ್ಲಿನ ವೇಷಗಳು
ಮತ್ತು
ಯಕ್ಷಗಾನದಲ್ಲಿ ರಾಜಕೀಯ ರೀತಿಯ
ಸಂಭಾಷಣೆಗಳು

-ಶ್ರೀನಿವಾಸ ಜೋಕಟ್ಟೆ


# ಮಾಸ್ತಿ ಜೀವನ ಸಾಧನೆ

''ಶ್ರೀನಿವಾಸ'' ಎಂಬ ಕಾವ್ಯ ನಾಮದಿಂದ ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹೊಸಗನ್ನಡ ಸಾಹಿತ್ಯ ಪರಂಪರೆಯ ನಿರ್ಮಾಪಕರಲ್ಲಿ ಒಬ್ಬರು. ತಮ್ಮ ಸಾಹಿತ್ಯ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ನಾಡಿನ ಪ್ರಥಮ ಪಂಕ್ತಿಯ ಲೇಖಕರಲ್ಲಿ ಇವರು ಅಗ್ರಗಣ್ಯರು. ಕನ್ನಡ ಕಥಾ ಕ್ಷೇತ್ರಕ್ಕೆ ಮಾಸ್ತಿಯವರ ಕೊಡುಗೆ ಅಪೂರ್ವವಾದದು. ಕನ್ನಡ ಕಾವ್ಯ ಪ್ರಪಂಚದಲ್ಲಿ ಆದಿ ಕವಿ ಪಂಪ ಹೇಗೊ, ಹಾಗೆ ಕನ್ನಡ ಕಥಾ ಕ್ಷೇತ್ರದಲ್ಲಿ ಮಾಸ್ತಿಯವರು.

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿಗೆ ಸೇರಿದ ಒಂದು ಗ್ರಾಮದ ಹೆಸರೆ ಮಾಸ್ತಿ. ಆ ಗ್ರಾಮದ ಹೆಸರೆ ಕನ್ನಡದ ದೊಡ್ಡ ಪ್ರತಿಭಾವಂತರ ಹೆಸರಾಗಿ ಬಿಟ್ಟಿರುವುದು ಒಂದು ಪವಾಡ. ಆ ಪವಾಡ ಪುರುಷನೆ ಮಾಸ್ತಿ ವೆಂಕಟೇಶ ಅಯ್ಯಂಗಾರರು. ರಾಮಸ್ವಾಮಿ ಅಯ್ಯಂಗಾರ್ ಮತ್ತು ತಿರುಮಲಮ್ಮ ದಂಪತಿಗಳ ದ್ವಿತೀಯ ಪುತ್ರರಾಗಿ 1891ರಲ್ಲಿ ''ಶ್ರೀನಿವಾಸ''ರು ಜನಿಸಿದರು.

ಮಾಸ್ತಿಯವರು ಹುಟ್ಟುವ ಕಾಲಕ್ಕೆ ಶ್ರೀಮಂತಿಕೆಯಿಂದ ಮರೆದಿದ್ದ ಅವರ ಮನೆಯಲ್ಲಿ ಬಡತನ ತಾಂಡವವಾಡತೊಡಗಿತ್ತು. ಮಾಸ್ತಿಯವರು ಹುಟ್ಟಿದ ಸಮಯಕ್ಕೆ ಸರಿಯಾಗಿ ಅವರ ತಂದೆ ಅಧಿಕಾರವನ್ನು ಕಳೆದುಕೊಂಡರು. ಒಬ್ಬ ಅಣ್ಣ ತೀರಿಕೊಂಡರು. ಹೀಗೆ ಶ್ರೀನಿವಾಸರ ಕುಟುಂಬ ಎಂದೂ ಕಾಣದ ಬಡತನವನ್ನು ಮುಟ್ಟಿತು. ಮನೆಯಲ್ಲಿ ಇಂತಹ ಕಠಿಣ ಪರಿಸ್ಥಿತಿ ಇದ್ದರೂ ಓದಿನಲ್ಲಿ ಅವರಿಗೆ ಬಹಳ ಆಸಕ್ತಿ ಇತ್ತು. ಪ್ರತಿ ತರಗತಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾಗುತ್ತಿದ್ದರು. ಮೈಸೂರು ಸರಕಾರದ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂತು ಅದರಲ್ಲಿ ಪ್ರಥಮ ಸ್ಥಾನಗಳಿಸಿ ಸರಕಾರಿ ಅಧಿಕಾರಿಯಾಗಿ ಸೇವೆ ಸಲ್ಲಿಸತೊಡಗಿದರು. ಕೊನೆಗೆ Excise ಕಮಿಶನರ್ ಹುದ್ದೆಯಿಂದ ನಿವೃತ್ತರಾದರು. ಮಾಸ್ತಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಹೊಸಗನ್ನಡ ಅರುಣೋದಯ ಕಾಲದಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ ಮಾಸ್ತಿಯವರು ಸುಮಾರು ಎಂಟು ದಶಕಗಳಷ್ಟು ಕಾಲ ತಮ್ಮ ಸಾಹಿತ್ಯ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಸಣ್ಣಕತೆ, ಕಾದಂಬರಿ, ನಾಟಕ, ಕಾವ್ಯ, ವಿಮರ್ಶೆ, ಲೇಖನ, ಭಾಷಾಂತರ ಹೀಗೆ ಮಾಸ್ತಿಯವರು ಕೈಯಾಡಿಸದ ಸಾಹಿತ್ಯ ಪ್ರಕಾರವಿಲ್ಲ. ಆದರೂ ಸಣ್ಣಕತೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶ್ರೀನಿವಾಸರದು ಅನುಪಮ ಸಾಧನೆ. ಮಾಸ್ತಿಯವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ಸಣ್ಣ ಕತೆಗಳ ರಚನೆಯಿಂದಲೇ 1909ರಲ್ಲಿ ಸುಮಾರಿಗೆ ಅವರ ಮೊಟ್ಟ ಮೊದಲ ಕಥೆ 'ರಂಗನ ಮದುವೆ' ಪ್ರಕಟವಾಯಿತು. ಆ ನಂತರ ಏಳೆಂಟು ದಶಕಗಳಷ್ಟು ಕಾಲ ಮಾಸ್ತಿಯವರು ಈ ಪ್ರಕಾರಕ್ಕೆ ಒಂದು ನಿಶ್ಚಿತ ರೂಪವನ್ನು ಕೊಟ್ಟಿದ್ದೆ ಅಲ್ಲದೆ, ಸಣ್ಣ ಕತೆಗಳ ಸಾಧ್ಯತೆಯನ್ನು ಹಿಗ್ಗಿಸಿ ಸಾಹಿತ್ಯದಲ್ಲಿ ಅದಕ್ಕೊಂದು ಶಾಶ್ವತ ಸ್ಥಾನವನ್ನು ದೊರಕಿಸಿಕೊಟ್ಟರು. ಅವರ ಪ್ರತಿಭೆಗೆ ನಿಲುಕದ ಕಥಾ ವಿಧಾನವಿಲ್ಲ. ಶ್ರೀನಿವಾಸರು ಹಲವಾರು ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಕಾಲ್ಪನಿಕ ಕತೆಗಳನ್ನು ಕಂಡ, ಕೇಳಿದ, ಊಹಿಸಿದ ಆಧಾರದ ಮೇಲೆ, ದಿನಚರಿಯ, ಪತ್ರ ರಚನೆಯ, ಸಂಭಾಷಣೆಯ ರೂಪದಲ್ಲಿ ರಚಿಸಿ



ಸಮಕಾಲೀನ ಮತ್ತು ಕಿರಿಯ ಪೀಳಿಗೆಯ ಕಥೆಗಾರರಿಗೆ ಆದರ್ಶರಾಗಿದ್ದಾರೆ.

ಮಾಸ್ತಿಯವರಿಗೂ ಮೊದಲು ಪಂಜೆ - ಮಂಗೇಶ್ ರಾವ್, ಕೆರೂರ ವಾಸುದೇವಾಚಾರ್ಯ, ಎಂ.ಎನ್. ಕಾಮತ್ ಮೊದಲಾದವರು ಕಥೆಗಳನ್ನು ಬರೆದಿರಬಹುದಾದರೂ, ಕಥಾ ಪ್ರಕಾರದ ರೂಪರೇಷೆಗಳನ್ನು. ವ್ಯಾಪಕ ಮಹತ್ವವನ್ನು ಗುರುತಿಸಿ ''ಕತೆ ಎಂದರೆ ಇದು'' ಎಂದು ಹೇಳುವಷ್ಟರ ಮಟ್ಟಿಗೆ ಜೀವನಾನುಭವದ ರಸಘಟ್ಟಗಳನ್ನು ಗುರುತಿಸಿ ಅವುಗಳಿಗೆ ಪ್ರಾಣ ಸಂಚಾರವಾದ ಧ್ವನಿ ಶಕ್ತಿಯನ್ನು ನೀಡಿದವರು ಶ್ರೀನಿವಾಸರೇ. ಈ ಕಾರಣದಿಂದ ಅವರು ಸಹಜವಾಗಿ ಸಣ್ಣ ಕತೆಗಳ ಜನಕರೆನಿಸಿದ್ದಾರೆ.

ಸಂಖ್ಯಾ ದೃಷ್ಟಿಯಿಂದಷ್ಟೇ ಅಲ್ಲವಷ್ಟು ವೈವಿಧ್ಯದ ದೃಷ್ಟಿಯಿಂದಲೂ ಮಾಸ್ತಿಯವರ ಕತೆಗಳ ಹರಹು ದೊಡ್ಡದು. ವ್ಯಾಪಕವಾದದ್ದು. ಅವರು ನೂರಕ್ಕೂ ಹೆಚ್ಚು ಕಥೆಗಳನ್ನು ರಚಿಸಿದ್ದಾರೆ. ಆದರೆ ಇಷ್ಟೊಂದು ದೊಡ್ಡ ಪ್ರಮಾಣದ ಕಥೆಗಳ ವಸ್ತುಗಳು ಕೂಡ ಬೆರಗು ಹುಟ್ಟಿಸುವಷ್ಟು ವೈವಿಧ್ಯಮಯವಾಗಿದೆ. ಇತರ ಹತ್ತು ಕಥೆಗಳು, ಕೆಲವು ಸಣ್ಣ ಕಥೆಗಳು, ನಾಲ್ಕು ಸಣ್ಣ ಕಥೆಗಳು ಮುಂತಾದವು ಅವರ ಪ್ರಮುಖ ಕಥಾ ಸಂಕಲನಗಳು. ಅವರ ಕಥೆಗಳಲ್ಲಿ ಬದುಕನ್ನು ಇಡಿಯಾಗಿ ನೋಡುವ ಸೂಕ್ಷ್ಮ ದೃಷ್ಟಿಯಿದೆ. ಪ್ರಬುದ್ಧ ಜೀವನ ದರ್ಶನವಿದೆ, ಮಾನವೀಯ ಅನುಕಂಪವಿದೆ, ಮನುಷ್ಯನ ಘನತೆಯನ್ನು ಎತ್ತಿ ಹಿಡಿಯುವ ಸದಭಿರುಚಿಯಿದೆ.

ಮಾಸ್ತಿಯವರು ಎರಡು ಮಹತ್ವದ ಕಾದಂಬರಿಗಳನ್ನು ರಚಿಸಿದ್ದಾರೆ. ಅವುಗಳೆಂದರೆ ''ಚೆನ್ನ ಬಸವ ನಾಯಕ'' ಮತ್ತು ''ಚಿಕವೀರ ರಾಜೇಂದ್ರ'' ಐತಿಹಾಸಿಕ ಎನ್ನಬಹುದಾದ ಈ ಎರಡು ಕಾದಂಬರಿಗಳಲ್ಲಿ ''ಮನುಷ್ಯ ಪ್ರಯತ್ನವನ್ನು ಮೀರಿದ ಶಕ್ತಿಯೊಂದಿದೆ'' ಎಂಬ ಧ್ವನಿ ಇದೆ. 'ಚೆನ್ನ ಬಸವ ನಾಯಕ' ಬಿದನೂರು ಎಂಬ ಸಣ್ಣ ಸಂಸ್ಥಾನದ ಉತ್ತರಾಧಿಕಾರಿ. ಚೆನ್ನ ಬಸವನಾಯಕ ಪಟ್ಟವೇರುವ ಸಂದರ್ಭದಲ್ಲಿ ವೀರಮ್ಮಾಜಿ. ನಂಬಯ್ಯರು ನಡೆಸಿದ ಕುಯುಕ್ತಿಗಳನ್ನು ದಾಖಲಿಸಿದರೆ 'ಚಿಕವೀರ ರಾಜೇಂದ್ರ' ಕೊಡಗಿನ ಚರಿತ್ರೆಗೆ ಸಂಬಂಧಿಸಿದ, ಕಡೆಯ ಅರಸ ಚಿಕವೀರ ರಾಜೇಂದ್ರ, ಅವನ ಸ್ನೇಹವನ್ನು ಸಂಪಾದಿಸಿದ ಕುಂಟ ಬಸವ ಇವರ ದೌರ್ಜನ್ಯಗಳನ್ನು ಆ ಮೂಲಕ ಅರಸನು ಹೊಂದಿದ ಅವನತಿಯನ್ನು ಚಿತ್ರಿಸುತ್ತದೆ. 'ಚಿಕವೀರ ರಾಜೇಂದ್ರ' ಕಾದಂಬರಿಗೆ ಜ್ಞಾನ ಪೀಠ ಪ್ರಶಸ್ತಿ ಲಭಿಸಿದೆ.

ಶ್ರೀನಿವಾಸರು ಕಾವ್ಯ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಬಿನ್ನಹ, ಅರುಣ, ಚೆಲುವ, ತಾವರೆ, ಮಲಾರ, ನವರಾತ್ರಿ, ಗೌಡರ ಮಲ್ಲಿ, ರಾಮನವಮಿ, ಮೂಕನ ಮಕ್ಕಳು, ಮನವಿ, ಸನೀತ, ಸಂಕ್ರಾಂತಿ ಮತ್ತು ಶ್ರೀರಾಮ ಪಟ್ಟಾಭಿಷೇಕ ಮುಂತಾದವು ಅವರ ಪ್ರಮುಖ ಕವನ ಸಂಕಲನಗಳು. ಅವರು ಕವಿತೆಗಳಲ್ಲಿ ತೋರುವ ದೃಷ್ಟಿ ಧಾರ್ಮಿಕವಾದದ್ದು. ಆಧ್ಯಾತ್ಮಿಕವಾದದ್ದು. ಅದು ಧರ್ಮಸಹಿಷ್ಣುತೆಯ ಮೌಲ್ಯದಲ್ಲಿ ಅಡಕಗೊಂಡ ಉದಾರವಾದಿ ದೃಷ್ಟಿ. ಭಾಷೆಯ ಹದದಿಂದ. ಅರ್ಥಾನುಸಾರಿಯಾದ ಶುದ್ಧ ಗತಿಯಲ್ಲಿ ಸಾಗುವ ಅವರ ಕವನಗಳು ಶಬ್ದಲಯದ ಮೂಲಕವೇ ಓದುಗನಲ್ಲಿ ಭಾವ ಪ್ರಚೋದನೆಯನ್ನು ಉಂಟು ಮಾಡಬಲ್ಲವು.

ಮಾಸ್ತಿಯವರ ಕಾವ್ಯ ಹಾಗೂ ಕಥಾ ಸಾಹಿತ್ಯಗಳ ಹಿಂದೆ ಕೆಲಸ ಮಾಡಿರುವ ಮನೋಧರ್ಮವೇ ಅವರ ನಾಟಕಗಳ ಹಿಂದೆಯೂ ಕಾಣಿಸಿಕೊಳ್ಳುತ್ತದೆ. ತಾಳಿಕೋಟೆ, ಶಿವ ಛತ್ರಪತಿ, ಕಾಕನ ಕೋಟೆ, ಉಷಾ, ಸಾವಿತ್ರಿ, ಯಶೋಧರಾ ಮೊದಲಾದವು (ಪುಟ 7ಕ್ಕೆ)

# ಗಾಂಧೀವಾದಿ ಶತಾಯುಷಿ ನಿಟ್ಟೂರರಿಗೆ ನಮನ

- ನಾಗಭೂಷಣ

"ನೂರುದಾಟಿದ್ಮೇಲೂ ನಿಟ್ಟೂರರು 'ನೀಟ್' ಆಗಿದ್ದಾರೆ, ಸ್ವೀಟಾಗಿ ಕೂಡ ಇದ್ದಾರೆ, ಯಾರಾದ್ರೂ ಬಂದ್ರೆ ಸಡಗರದಿಂದ ಮೀಟ್ ಮಾಡ್ತಾರೆ, ಖುಷಿಯಿಂದ ಚ್ಯಾಟ್ ಮಾಡ್ತಾರೆ. ಅವರು ದೇವರಂತಹವರು, ಮಗುಮನಸ್ಸಿನವರು, ವಿಶ್ವಮಾನವರು, ಒಟ್ಟಿನಲ್ಲಿ 21ನೇ ಶತಮಾನದಲ್ಲಿ ಓಡಾಡುವ 20ನೇ ಶತಮಾನದ ಪುರುಷರು, ನಿತ್ಯ ಸಂವಾದಿ, ನಿರಂತರ ಆಶಾವಾದಿ, One More Gandhian Lost" ಎಂದೆಲ್ಲಾ ಪತ್ರಿಕೆಗಳು ನಿಟ್ಟೂರು ಶ್ರೀನಿವಾಸರಾಯರ ನಿಧನದ ಮಾರನೇ ದಿನ ಬಣ್ಣಿಸಿದುವು.

ಆಗಸ್ಟ್ 24ಕ್ಕೆ 102ನೇ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳಬೇಕಿದ್ದ ಈ ರಸ ಋಷಿಯನ್ನು ವಿಧಿ ಆಗಸ್ಟ್ 12ಕ್ಕೆ ತನ್ನ ಬಳಿ ಕರೆದೊಯ್ಯಿತು.

ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿ ತಾಲ್ಲೂಕ್ ನಿಟ್ಟೂರಿನಲ್ಲಿ ಆಗಸ್ಟ್ 24 1903ರಂದು ನಿಟ್ಟೂರರು ಜನಿಸಿದರು. ಹೊಸದುರ್ಗ, ಚಳ್ಳಕೆರೆ, ಶಿವಮೊಗ್ಗೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಿಕ್ಷಣ ಪಡೆದರು. ಬೆಂಗಳೂರಿನ ಸೆಂಟ್ರಲ್‌ಕಾಲೇಜಿನಲ್ಲಿ ಬಿ.ಎಸ್.ಸಿ., ಪದವಿ ಪಡೆದು, ಮದರಾಸು ವಿಶ್ವ ವಿದ್ಯಾಲಯದ ಕಾನೂನು ಪದವಿ ಪಡೆದರು.

1921ರಲ್ಲಿ ದಿವಾನ್ ಎಂ.ಎನ್. ಕೃಷ್ಣ ರಾವ್ ಅವರ ಮಗಳು ಪದ್ಮಮ್ಮರವರನ್ನು ವಿವಾಹವಾದರು. 1927ರಲ್ಲಿ ವಕೀಲಿ ವೃತ್ತಿ ಆರಂಭಿಸಿದರು. 1928ರಲ್ಲಿ ಸತ್ಯಶೋಧನ ಪುಸ್ತಕ ಭಂಡಾರ, ಪುಸ್ತಕ ಪ್ರಕಾಶನ ಮತ್ತು ಮಳಿಗೆಯನ್ನು ಆರಂಭಿಸಿದರು 1930ರಿಂದ 1942ರ ವರೆಗೆ, ಮಹಾತ್ಮಗಾಂಧಿ, ಪಂಡಿತಜವಾಹರಲಾಲ್ ನೆಹರು, ರವೀಂದ್ರನಾಥ ಟಾಗೋರ್, ಲಾಲ್‌ಬಹದ್ದೂರ್ ಶಾಸ್ತ್ರೀಯವರಂತಹ ಮಹಾನ್ ವ್ಯಕ್ತಿಗಳ ಒಡನಾಟ ಹೊಂದಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. 1945ರಲ್ಲಿ ಡಿ.ವಿ.ಜಿ.ಯವರ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಡಿ.ವಿ.ಜಿ.ಯವರೊಡನೆ ಸಹಕರಿಸಿ ಕೊನೆಯವರಿಗೂ ಆ ಸಂಸ್ಥೆಯಲ್ಲಿ ದುಡಿದುದು ಇತಿಹಾಸ. 1953ರಲ್ಲಿ ಅಡ್ವೊಕೇಟ್ ಜನರಲ್ ಆದರು. 1955ರಲ್ಲಿ ಹೈ ಕೋರ್ಟಿನಲ್ಲಿ ನ್ಯಾಯ ಮೂರ್ತಿ ಸ್ಥಾನ ದೊರಕಿತು. 1961ರಲ್ಲಿ ಮುಖ್ಯ ನ್ಯಾಯಮೂರ್ತಿಯ ಗೌರವ, 1963ರಲ್ಲಿ ಕರ್ನಾಟಕದ ಹಂಗಾಮಿ ರಾಜ್ಯಪಾಲರಾಗಿದ್ದರಲ್ಲದೆ, ಸ್ವಾತಂತ್ರ್ಯೋತ್ಸವದ ಭಾಷಣವನ್ನು ಕನ್ನಡದಲ್ಲಿ ಮಾಡಿ, ಕನ್ನಡ ಬಾವುಟವನ್ನು ದಿಗಂತದೆತ್ತರಕ್ಕೆ ಹಾರಿಸಿದರು. 1964ರಲ್ಲಿ ಕೇಂದ್ರ ಸರ್ಕಾರದ ಪ್ರಥಮ ಸೆಂಟ್ರಲ್ ವಿಜಿಲೆನ್ಸ್ ಕಮಿಷನರಾಗಿ ಕೆಲಸ ಮಾಡಿ 1968ರಲ್ಲಿ ನಿವೃತ್ತರಾದರು.

ದಕ್ಷಿಣ ಭಾರತದ ಹಿಂದಿ ಪ್ರಚಾರ ಸಭಾ, ಬೆಂಗಳೂರು ವಿಶ್ವವಿದ್ಯಾಲಯ 1996ರಲ್ಲಿ ಗೌರವ ಡಾಕ್ಟರೇಟ್ ಪ್ರಧಾನ ಮಾಡಿದರೆ, 1997ರಲ್ಲಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ತನ್ನನ್ನು ತಾನು ಗೌರವಿಸಿ ಕೊಂಡಿತು.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತು ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ಕರ್ನಾಟಕ ಪ್ರಕೃತಿ ಚಿಕಿತ್ಸಾ ಪರಿಷತ್ತಿಗೆ ದುಡಿದರಲ್ಲದೆ, ಇಂಡಿಯನ್ ಲಾ ಇನ್ಸಿಟ್ಯೂಟ್ ಸೇರಿದಂತೆ ಹಲವಾರು ಕಾನೂನು ಸಂಸ್ಥೆಗಳಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಕಾಳಿದಾಸ



ಕಲಾಕೇಂದ್ರದ ಅಧ್ಯಕ್ಷರೂ ಆಗಿದ್ದರು.

ತಾವು ಸ್ಥಾಪಿಸಿದ ಸತ್ಯ ಶೋಧನ ಪ್ರಕಟಣ ಮಂದಿರದಲ್ಲಿ ಕನ್ನಡದ ದಿಗ್ಗಜರಾದ ವಿ.ಸೀ. ಗೊರೂರು, ಡಿ.ವಿ.ಜಿ., ರಾಜರತ್ನಂ, ಎಲ್. ಗುಂಡಪ್ಪ, ಶಿವರಾಮ ಕಾರಂತ ಮುಂತಾದವರ ಕೃತಿಗಳನ್ನು ಪ್ರಕಟಿಸಿದ್ದರು. ಪತ್ನಿ ಪದ್ಮಮ್ಮರವರೊಡಗೂಡಿ ಗಾಂಧೀಜಿಯವರ ಆತ್ಮ ಕಥೆಯನ್ನು ಅನುವಾದಿಸಿ 'ಸತ್ಯ ಶೋಧನ' ಎಂಬ ಕೃತಿಯನ್ನು ಹೊರತಂದಿದ್ದರು. ಗಾಂಧೀಜಿಯವರ ಭಗವದ್ಗೀತೆಯ ವ್ಯಾಖ್ಯಾನ ಅನಾಸಕ್ತಿ ಯೋಗವನ್ನು ಅನುವಾದಿಸಿದ್ದರು. ಬರೋಡಾದಲ್ಲಿ ನಡೆದ ಹೊರನಾಡ ಕನ್ನಡಿಗರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ವ್ಯಕ್ತಿತ್ವ :

ರಾಜ್ಯದ ಅದರಲ್ಲೂ ಬೆಂಗಳೂರಿನ ಜನಮನದೊಂದಿಗೆ ಒಂದಾಗಿ ಹೋಗಿದ್ದ ನಿಟ್ಟೂರ್ ಶ್ರೀನಿವಾಸರಾಯರು, ಪ್ರತಿ ದಿನವೂ ಸಾಂಸ್ಕೃತಿಕ, ವಿಚಾರಸಂಕಿರಣ, ಸನ್ಮಾನ ಮುಂತಾದ ಕಾರ್ಯಕ್ರಮಗಳಲ್ಲಿ ಮುಂದೆ ಬಂದು ಕುಳಿತರೆ, ಆ ಕಾರ್ಯಕ್ರಮಕ್ಕೆ ಶೋಭೆ, ಗಾಂಭೀರ್ಯ ಬರುತ್ತಿತ್ತು. ನಿಟ್ಟೂರರ ಜ್ಞಾಪಕ ಶಕ್ತಿಗೆ ಎಲ್ಲರೂ ಆಶ್ಚರ್ಯ ಚಕಿತರಾಗುತ್ತಿದ್ದರು. ತಮ್ಮ ಶಿಕ್ಷಣದ ಸಂದರ್ಭದಿಂದ, ಮೊನ್ನೆ ಮೊನ್ನೆಯವರೆಗಿನ ಕ್ಷಣದವರೆಗೂ ಸಚಿತ್ರ ವರದಿಯಂತೆ ನಮ್ಮ ಮುಂದೆ ಘಟನೆ, ವ್ಯಕ್ತಿಗಳು ಹಾಗೂ ಪ್ರಸಂಗಗಳನ್ನು ತೆರೆದಿಡ ಬಲ್ಲವರಾಗಿದ್ದರು. ಅವರ ಸಂಬಂಧಿಕರ್‍ಯಾರಾದರು ಅವರನ್ನು ಭೇಟಿ ಮಾಡಿದರೆ ಅವರ ಮನೆ ಮಂದಿಯ ಒಬ್ಬೊಬ್ಬರನ್ನೂ ಹೆಸರಿಸಿ ಅವರ ಕ್ಷೇಮ ಸಮಾಚಾರಗಳನ್ನು

---

ಶ್ರೀ ನಿಟ್ಟೂರು ಶ್ರೀನಿವಾಸರಾಯರು 1987ರಲ್ಲಿ ಮೈಸೂರು ಅಸೋಸಿಯೇಶನ್ ಡಿ.ಜಿ.ವಿ. ಶತಮಾನೋತ್ಸವವನ್ನು ಆಚರಿಸಿದಾಗ ಆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅಸೋಸಿಯೇಶನ್‌ನ ಕಾರ್ಯಕಲಾಪಗಳನ್ನು ಬಹಳ ಮೆಚ್ಚಿಕೊಂಡಿದ್ದರು. ಶ್ರೀಮತಿ ಲೀಲಾ ಜೋಯಿಸ್ ನಮ್ಮ ಒಬ್ಬ ಬಹಳ ಹಿರಿಯ ಸದಸ್ಯೆ ಹಾಗೂ ನೇಸರುವಿಗಾಗಿ ವಿಶೇಷ ಲೇಖನಗಳನ್ನು ಬರೆದುಕೊಟ್ಟು ಸಹಕರಿಸಿರುತ್ತಾರೆ. ನಿಟ್ಟೂರರು ಅವರಿಗೆ ಬರೆದ ಪತ್ರದಲ್ಲಿ ನೇಸರುವಿನ ಬಗ್ಗೆ ಅಭಿಮಾನ ವ್ಯಕ್ತ ಪಡಿಸಿರುತ್ತಾರೆ. ಅದರ ಪ್ರತಿಯನ್ನು ಇಲ್ಲಿ ಪ್ರಕಟಿಸಿದ್ದೇವೆ.

ಈ ಧೀಮಂತ ವ್ಯಕ್ತಿಗೆ ನೇಸರುವಿನ ಶತಪ್ರಣಾಮಗಳು.

***

*ಸನ್ಮಾನ್ಯರೂ ಪ್ರಿಯರೂ ಆದ ಶ್ರೀ ಲೀಲಾ ಅವರ ಸ[illegible]ಕ್ಕೆ ಉಭಯ ಕುಶಲೋಪರಿ ಸಾಂಪ್ರತ*

*ನೀವು ಕಳುಹಿಸಿದ ನೇಸರು ತಿಂಗಳೋಲೆ (ನವೆಂಬರ್ 2002) ತಲುಪಿ ತುಂಬಾ ಸಂತೋಷವಾಯಿತು. ನನ್ನ ವಿಷಯ ನೀವು ಬರೆದಿರುವ ಲೇಖನ ನಿಮಗೆ ನನ್ನಲ್ಲಿರುವ ಅಭಿಮಾನವನ್ನು ತೋರಿಸುತ್ತದೆ. ಇದಕ್ಕಾಗಿ ನಾನು ನಿಮ್ಮ ಔದಾರ್ಯಕ್ಕಾಗಿ ಅತ್ಯಂತ ಕೃತಜ್ಞನಾಗಿದ್ದೇನೆ.*

*ತಿಂಗಳೋಲೆಯಲ್ಲಿರುವ ಮಿಕ್ಕ ಎಲ್ಲಾ ಲೇಖನಗಳನ್ನೂ ಕುತೂಹಲದಿಂದ ಓದಿದೆ. ನನ್ನ ಮಿತ್ರರಾದ ದಿವಂಗತ HVR Iyengar ರವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಶ್ರೀ ಚಂಪಕನಾಥ್‌ರವರು ಬರೆದ ಲೇಖನ ಓದಿ ತುಂಬಾ ಹರುಷವಾಯಿತು. ಹಾಗೆಯೇ ಉಳಿದ ಲೇಖನಗಳನ್ನು ಆಸಕ್ತಿಯಿಂದ ಓದಿದೆ.*

*ಇಂತು ಆದರದ ವಂದನೆಗಳೊಡನೆ*

*ನಿಮ್ಮ*

*ನಿಟ್ಟೂರು ಶ್ರೀನಿವಾಸರಾವ್*

ವಿಚಾರಿಸುತ್ತಿದ್ದರು. ನಿಟ್ಟೂರರು ಪ್ರಗತಿಪರ ವಿಚಾರಧಾರೆಯವರು. ಅವರು ಎಂದೂ ನಮ್ಮ ಕಾಲ ಚೆನ್ನಾಗಿತ್ತು ಈಗ ಕಾಲಕೆಟ್ಟು ಹೋಯಿತು ಎಂದವರಲ್ಲ. ತಮ್ಮ ಕಾಲದ ಪದ್ಧತಿ ನ್ಯೂನತೆಗಳನ್ನು ಒಪ್ಪಿಕೊಳ್ಳುತ್ತಾ ಇಂದಿನ ಕಾಲದ ಒಳ್ಳೆಯ ಅಂಶಗಳನ್ನು ಪಟ್ಟಿ ಮಾಡಬಲ್ಲ ವಿಶಾಲ ಹೃದಯಿಗಳು. ಯಾವ ವ್ಯವಸ್ಥೆಯನ್ನೂ ಅವರು ಟೀಕಿಸುತ್ತಿರಲಿಲ್ಲ. ಕಿರಿಯರು ಪ್ರಶಸ್ತಿ ಪಡೆದಾಗ ಅಭಿನಂದಿಸಿ ಪ್ರೋತ್ಸಾಹಿಸುತ್ತಿದ್ದರು. ನಿಮ್ಮ ಆಯುಷ್ಯದ ಗುಟ್ಟೇನು? ಎಂದು ಕೇಳಿದವರಿಗೆ ''ನನಗೂ ಅದು ಗುಟ್ಟು. ಜೀವನ ನಡೆದು ಬಂದಿದೆಯೇ ಹೊರತು ಅದು ನನ್ನ ಸಾಧನೆಯಲ್ಲ. ಅದಕ್ಕೇನೂ ನಾನು ವಿಶೇಷ ಪ್ರಯತ್ನ ಮಾಡಿಲ್ಲ. ಏನು ದೈವ ಅಂತೀರೋ ಅದಕ್ಕೆ ನಾನು ಕೃತಜ್ಞ. ನನಗೆ ಇಷ್ಟೊಂದು ಜನರ ಸಹವಾಸ ಪ್ರೀತಿ ವಾತ್ಸಲ್ಯ ದೊರೆತಿದೆ. ಅದಕ್ಕಾಗಿ ನಾನು ಸಂತೋಷಿ'' ಎಂದು ಸರಳ ಸಜ್ಜನಿಕೆಯಿಂದ ಉತ್ತರಿಸುತ್ತಿದ್ದರು.

ಹೀಗೆ ನೂರು ವರ್ಷಗಳು ಅಖಂಡ ಜೀವನ ನಡೆಸಿ, ಮೂರು ತಲೆ ಮಾರುಗಳ ರಾಜಕೀಯ, ಸಾಮಾಜಿಕ ಆಗು ಹೋಗುಗಳಿಗೆ ಜ್ವಲಂತ ಸಾಕ್ಷಿಯಾಗಿದ್ದ ನಿಟ್ಟೂರರು ಆಗಸ್ಟ್ 12, 2004ರಂದು ಬೆಳಗ್ಗೆ 8.00 ಗಂಟೆಯಿಂದ ಚರಿತ್ರೆಯ ಭಾಗವಾಗಿ ಹೋದರು.

ಜೂನ್ 24ರಂದು ಚಂದನ ದೂರದರ್ಶನದಲ್ಲಿ ನಮ್ಮ ಸಂದರ್ಶನದ ಪ್ರಸಾರವನ್ನು ವೀಕ್ಷಿಸಿದ ನಿಟ್ಟೂರರು (ನಮಗೆ ಸಂಬಂಧಿಗಳಾಗಬೇಕು) ನಮ್ಮನ್ನು ಅಭಿನಂದಿಸಿ, ಬೆಂಗಳೂರಿಗೆ ಬಂದಾಗ ತಮ್ಮ ಮನೆಗೆ ಬರಬೇಕೆಂದು ಪತ್ರ ಬರೆದು ಆಹ್ವಾನಿಸಿದ್ದರು. ಆಗಸ್ಟ್ 24ರಂದು ಬೆಂಗಳೂರಿಗೆ ಹೋಗಿ ಅವರ 102ನೇ ಹುಟ್ಟುಹಬ್ಬದಂದು ಅವರ ಆಶೀರ್ವಾದ ಪಡೆಯಬೇಕೆಂಬ ಯೋಜನೆ ಫಲಿಸಲಿಲ್ಲ. ಪ್ರಶಸ್ತಿಗಳಿಗಿಂತಲೂ ಹೆಚ್ಚು ಮೌಲ್ಯವಾದ ನಿಟ್ಟೂರರ ಪತ್ರ ಸದಾ ಅವರ ನೆನಪನ್ನು ನಮಗೆ ತರುತ್ತದೆ. ಕಳೆದ ವರ್ಷ ನಿಟ್ಟೂರರ ಶತಮಾನೋತ್ಸವವನ್ನು ಸಂಭ್ರಮದಿಂದ ಸಾರ್ವಜನಿಕರು ಆಚರಿಸಿದ ಸಂದರ್ಭದಲ್ಲಿ ಖ್ಯಾತ ಕವಿ ಚೆನ್ನವೀರ ಕಣವಿಯವರು ರಚಿಸಿದ ಕವನ 'ನೂರೊಂದು ನಮನ'ವನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ಸೂಕ್ತ.

ನೀವು ಮೆಲ್ಲಗೆ ಬಂದು ಎದುರು ಕುಳಿತರೆ ಸಾಕು
ಸಭೆಗೊಂದು ಗಾಂಭೀರ್ಯ, ತಿಳಿನಗೆ ಸೂಸು ಪಾರ್ಯ
ನೆನಪಿನ ಗಣಿಯ ಮಣಿಯ ಹೊರತರುವು ದನಿವಾರ್ಯ
ಶತಮಾನದಿಹಾಸ ಬಿಚ್ಚಿ ಕಟ್ಟುವ ಮೆಲುಕು
ವೃತ್ತಿ ಪ್ರವೃತ್ತಿ ನ್ಯಾಯ ನಿಷ್ಠುರತೆ? ನಿಟ್ಟೂರು
ಭೋದೆ, ಬರವಣಿಗೆ ಪ್ರಕಾಶನ ಸತ್ಯ ಶೋಧನೆ
ಸಾಮಾನ್ಯರೊಡನೆ ಬೆರೆತು ನುರಿತ ಸವಿಚಿಂತನೆ
ಶಾಂತಿ ಚಳುವಳಿಗೆ ಬಳುವಳಿ ಮಾನವ ಹಕ್ಕು
ಕಿರಿಯರಾದರು ಕಲಿಯಬಹುದೆಂಬ ಹಿರಿಯ ಗುಣ
ಕಲೆ, ಸಾಹಿತ್ಯ ಸಂಸ್ಕೃತಿ, ಸದಾ ಸಂವಾದಿ
ಎಲ್ಲ ಹದ ಗೆಟ್ಟಿಲ್ಲ ಎಂಬ ಆಶಾವಾದಿ
ಒಟ್ಟಾಗಿ ನಿಂತು ನೈತಿಕ ಮಟ್ಟ ವೆತ್ತೋಣ
ಪ್ರಜಾಸತ್ತೆಗೆ ನೀಡಿ ಪರಿಶುದ್ಧತೆಯ ದೀಕ್ಷೆ
ನೂರಕ್ಕೆ ನೂರು ನಿಮ್ಮದೆ ಚಾರಿತ್ರ್ಯ ನಕ್ಷೆ.

(ವಿವಿಧ ಸಂಗ್ರಹಗಳಿಂದ ಸಿದ್ಧ ಪಡಿಸಿದ ಲೇಖನ)

## ಮಾಸ್ತಿ ಜೀವನ ಸಾಧನೆ

*(ಪುಟ 5 ರಿಂದ)*

ಅವರ ಪ್ರಮುಖ ನಾಟಕಗಳು. ಯಶೋಧರಾ ಇಡಿಯಾಗಿ ಸರಳ ರಗಳೆಯಲ್ಲಿದ್ದರೆ, ಕಾಕನ ಕೋಟೆಯಲ್ಲಿ ಜಾನಪದ ಸೊಬಗು, ಪದಲಾಲಿತ್ಯ, ಜನಜೀವನ ಚಿತ್ರಣ ಗಮನ ಸೆಳೆಯುವಂತಿದೆ.

1919ರ ಹೊತ್ತಿಗೆ ವಿಮರ್ಶೆಗಳನ್ನು ಬರೆಯ ತೊಡಗಿದ ಮಾಸ್ತಿಯವರು ಜನಪರ ಸಾಹಿತ್ಯ, ಆದಿಕವಿ ವಾಲ್ಮೀಕಿ, ಸಾಹಿತ್ಯ ಲಾಲನೆ, ಸಾಹಿತ್ಯ ಕಾಳಿದಾಸ ಎಂಬ ವಿಮರ್ಶಾ ಗ್ರಂಥಗಳನ್ನು ಪ್ರಕಟಿಸಿದರು. ಇದಲ್ಲದೆ ಹಲವಾರು ಪ್ರಬಂಧಗಳು, ಸಂಶೋಧನಾ ಗ್ರಂಥಗಳು, ಜೀವನ ಚರಿತ್ರೆಗಳನ್ನು ಶ್ರೀನಿವಾಸರು ಪ್ರಕಟಿಸಿದ್ದು 'ಭಾವ' ಎನ್ನುವ ಮೂರು ಸಂಪುಟಗಳ ಆತ್ಮ ಚರಿತ್ರೆಯನ್ನು ಪ್ರಕಟಿಸಿದ್ದಾರೆ. ಮಾಸ್ತಿಯವರು 'ಜೀವನ' ಎನ್ನುವ ಮಾಸ ಪತ್ರಿಕೆಯನ್ನು ಆರಂಭಿಸಿದರು. ಆ ಪತ್ರಿಕೆಯ ಮೂಲಕ ಅನೇಕ ಸಾಹಿತಿಗಳ ಕೃತಿಗಳು ಬೆಳಕು ಕಂಡಿವೆ.

ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆಯನ್ನು ಮಾಡಿದ ಮಾಸ್ತಿಯವರನ್ನು ಹಲವು ಪ್ರಶಸ್ತಿಗಳು ಅರಿಸಿಕೊಂಡು ಬಂದಿವೆ.

1983ರಲ್ಲಿ ಚಿಕವೀರ ರಾಜೇಂದ್ರ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ.

1969ರಲ್ಲಿ ಸಣ್ಣ ಕತೆಗಳ ಸಂಕಲನಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

1974ರಲ್ಲಿ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಲಭಿಸಿದೆ. ಮೈಸೂರಿನ ಮಹಾರಾಜರು ಇವರಿಗೆ ''ರಾಜ ಸೇವಾ ಪ್ರಸಕ್ತ'' ಎಂಬ ಬಿರುದನ್ನು ದಯ ಪಾಲಿಸಿದ್ದಾರೆ. ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟ್ ಪದವಿ ಕೊಟ್ಟು ಗೌರವಿಸಿವೆ.

1929ರಲ್ಲಿ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಮಾಸ್ತಿಯವರು ವಹಿಸಿದ್ದರು. ತುಂಬು ಜೀವನ ನಡೆಸಿದ ಶ್ರೀನಿವಾಸರು 1986ರಲ್ಲಿ ಇಹಲೋಕ ಯಾತ್ರೆ ಮುಗಿಸಿದರು.

ಹೀಗೆ ತಾವು ಕಂಡ ಲೋಕನುಭವಗಳನ್ನೆಲ್ಲ ಒಂದು ಗೂಡಿಸಿ ಅಪಾರ ಸಾಹಿತ್ಯ ಕೃತಿಗಳನ್ನು ರಚಿಸುವುದರ ಮೂಲಕ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿರಂಜೀವಿಯಾಗಿದ್ದಾರೆ.

- ಮಹೇಶ ಹೆಗ್ಡೆ

ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ

## ನಾನು ಮಣ್ಣಾದಾಗ

ಗುಡುಗು ಮಿಂಚುಗಳ ಅಂಜಿಕೆ ಎನಗಿಲ್ಲ
ಬೆಂಕಿ ಬಿರುಗಳಿಗೆ ಹೆದರುವವಳೂ ಅಲ್ಲ
ಮುಪ್ಪು ಎನ್ನನು ಕುಗ್ಗಿಸುವುದಿಲ್ಲ
ಬೇಧ ಭಾವವೆಂಬ ರೋಗ ಎನ್ನ ಕಾಡಿಸುವುದೂ ಇಲ್ಲ
ಅದೋ! ಮರಗಿಡಗಳು ನಲಿದಾಡುತಿವೆ
ಎನ್ನನು ಪರಟ ಪರ್ವತ ಶಿಖರಗಳು ಎದ್ದು ನಿಂತಿವೆ
ಎನಿಸಿ ತಮ್ಮದೇ ಇದು ಶೈಲಿ
ನದಿಗಳೋಡುತಿವೆ ನೋಡು ಎನ್ನನು ಸಾಗಿಸಿ... ಹ್ಹ !..
ಇವು ನನ್ನ ಸಾಗಿಸುವುದಾದರೂ ಎಲ್ಲಿಗೆ?!!
ನಾನಿದ್ದು ನೀನಾದೆಯೂ ಅಥವಾ ನೀನಿದ್ದು ನಾನಾದೆನೋ!
ಎಂಬುದೇ ನನ್ನ ಪ್ರಶ್ನೆ.
ಇಲಿ, ಮೊಲ, ಕೋಳಿಗಳು ನನ್ನ ತೋಟಕ್ಕೆ ಮುತ್ತಿಗೆ ಇಟ್ಟಾಗ
ಮತ್ತು ಇತರರು ನನ್ನನ್ನೇ ಅಗೆದು ಮಾರಿದಾಗ...
ನಾನೇನು ಗೋಳೆಂದು ಅಳುವೆನು!
ಛೆ ! ನೋಡಿಯೂ ನೋಡದ ಹಾಗೆ ಸುಮ್ಮನಿರುವೆ
ಏಕೆಂದರೆ ಅವುಗಳು ತಿನ್ನುವುದು ನನ್ನ ಎಂಜಲು ತಾನೆ !
ನಾನು ಮಣ್ಣು - ಮಣ್ಣಾಗಿಯೇ ಉಳಿಯುವೆನು... ಆದರೆ...
ನನ್ನನ್ನು ಮೆಟ್ಟಿನಿಂತು ಇವರು ಜಗಳಾಡುತ್ತಿರುವರು
ಕೇವಲ ನನಗಾಗಿ; ಕೆಲವೇ ದಿನಕ್ಕಾಗಿ... ಈ ನೀಚರು....
ಇವನ್ನೆಲ್ಲಾ ಸಹಿಸಿ ನಗುವೆನು ಮನದಲ್ಲೇ
ಏಕೆಂದರೆ ಕೊನೆಗೆ ಇವರೆಲ್ಲ ಬರುವರು ನನ್ನಲ್ಲಿ ತಾನೇ !
ಅದೆ ಕೊನೆಯ ಮಣ್ಣಿಗಾಗಿ, ಅಪೂರ್ವ ಶಾಂತಿಗಾಗಿ,
ಎಲ್ಲವನೂ ತೊರೆದು ಇದ್ದ ಹಾಗೇ..
ಪುನಃ ಮರಳಿ ಮಣ್ಣಿಗೆ.

- ಡಾ. ಫ್ಲೇವಿಯಾ.

# ಶಿಕ್ಷಣ - ಮಾಧ್ಯಮ

ಸೆಪ್ಟೆಂಬರ್ 5ರಂದು ಎಲ್ಲೆಡೆ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಓರ್ವ ಶಿಕ್ಷಕಿಯಾಗಿಯೂ, ಪಾಲಕರಾಗಿಯೂ ಶ್ರೀಮತಿ ಸುಮಾ ದ್ವಾರಕಾನಾಥ್ ಅವರು ತಮ್ಮ ಅನಿಸಿಕೆಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.

- ಸುಮಾ ದ್ವಾರಕಾನಾಥ್

ರಾಷ್ಟ್ರದಲ್ಲಿ ಪ್ರಮುಖವಾಗಿ ಗಮನ ಸೆಳೆಯುವ ತೀವ್ರವಾದ ವಿಚಾರವೆಂದರೆ ಶಿಕ್ಷಣ. ನಾಳಿನ ಪ್ರಜೆಗಳ ಸಂಸ್ಕೃತಿಯನ್ನು ರೂಪಿಸುವ ಇಂದಿನ ಶಿಕ್ಷಣ, ಅತ್ಯಂತ ಮಹತ್ವದ್ದು. ಇಂದು ವ್ಯಾಪಕವಾಗಿ ಬೆಳೆದ ಶಿಕ್ಷಣ, ಪ್ರಶ್ನೆಯೊಂದಿಗೆ ಅಷ್ಟೇ ಮಟ್ಟಿನ ಸಮಸ್ಯೆ ಸಂದೇಹಗಳು ಹುಟ್ಟಿಕೊಂಡಿವೆ. ಅವುಗಳ ನೆಲೆ, ಬೆಲೆಯನ್ನು ತಿಳಿದುಕೊಂಡು ಪರಿಣಾಮಕಾರಿ ಸಾಧನೆಗಳನ್ನು ರೂಪಿಸುತ್ತಾ ಮುಂದೆ ಸಾಗುವುದು ಹಿತಕರ.

ಮನುಷ್ಯನ ಸಾಮಾಜಿಕ ವ್ಯವಹಾರಗಳಿಗೆ ಭಾಷೆಯಂತಹ ಉಪಯುಕ್ತ ಸಾಧನ ಇನ್ನೊಂದಿಲ್ಲ. ಭಾಷಾ ಪ್ರಯೋಗ ಪರಿಣತಿ, ಇತರ ವಿವಿಧ ವಿದ್ಯಾಪರಿಣತಿಗಳಿಗೆಲ್ಲ ಆದಿ. ವಿದ್ಯಾಭ್ಯಾಸಕ್ಕೆ ಭಾಷಾಭ್ಯಾಸವೇ ಪ್ರಮುಖ ಸಾಧನ. ಜ್ಞಾನದ ಬೆಳಕು ಭಾಷೆ. ಭಾಷಾ ಜ್ಞಾನಕ್ಕೆ ಹಾಗೂ ಅದರ ಅಭಿವೃದ್ಧಿಗೆ ಸಾಧನಗಳು ಮೂರು - ಮಾತು, ಓದು, ಬರಹ ಇವು. ಪ್ರಾಥಮಿಕ ವಿದ್ಯಾಭ್ಯಾಸದ ಮುಖ್ಯ ಭಾಗವೇ ಓದು ಬರಹವಾಗಿದೆ. ನಮ್ಮ ಕರ್ನಾಟಕ ಪ್ರಾಂತದಲ್ಲಿ ಪ್ರಾಚೀನ ವಿದ್ಯಾಭ್ಯಾಸ ಪದ್ಧತಿಯ ಕುರಿತು ಅಲ್ಲಲ್ಲಿ ಶಾಸನಗಳ ಉಲ್ಲೇಖ ದೊರೆಯುತ್ತದೆ. ಹಿಂದೆ ಅಲ್ಲಲ್ಲಿದ್ದ ಘಟಿಕಗಳು, ಅಗ್ರಹಾರಗಳು, ಮಠಗಳು, ದೇವಸ್ಥಾನಗಳು ಪ್ರಾಥಮಿಕ ಶಿಕ್ಷಣಗಳಿಗೆ ಕೇಂದ್ರಗಳಾಗಿದ್ದವು. ಪ್ರೌಢ ಶಿಕ್ಷಣ ಸಂಸ್ಕೃತ ಭಾಷೆಯಲ್ಲಿ ಇರುತ್ತಿದ್ದರೆ ಪ್ರಾಥಮಿಕ ಶಿಕ್ಷಣ ನಡೆಯುತ್ತಿದ್ದುದು ಕನ್ನಡದಲ್ಲಿ ಸಿದ್ದವ್ವನ ಹಳ್ಳಿ ಕೃಷ್ಣ ಶರ್ಮ ತಮ್ಮ ಅನುಭವ ಹೇಳುತ್ತಾ, ಮೈಸೂರು ಆಂಧ್ರ ಗಡಿನಾಡಿನ ಶಾಲೆಯಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳು ಶಾಲೆಗೆ ಹೋಗಿ ಪರೀಕ್ಷೆ ಮಾಡಿದಾಗ, ಕನ್ನಡದ ಪ್ರಶ್ನೆ ಮಕ್ಕಳಿಗೆ ಸಂವಹನವಾಗಲಿಲ್ಲ. ಉಪಾಧ್ಯಾಯರ ಭಿನ್ನಹದ ಮೇರೆಗೆ ತೆಲುಗಿನಲ್ಲಿ ಕೇಳಿದಾಗ ಮಕ್ಕಳಿಂದ ಸರಿಯಾದ ಉತ್ತರ ಬಂದಿತಂತೆ.

ಇದು ಶಿಕ್ಷಣದ ಸಮಸ್ಯೆ. ಹುಡುಗರಿಗೆ ಅಭ್ಯಾಸ ಇರುವ ಭಾಷೆಯಲ್ಲಿ ಹೇಳಿದರೆ, ಕೇಳಿದರೆ ಅವರಿಗೆ ತಲೆಗೆ ಹತ್ತುತ್ತದೆ. ಬೇರೆ ಭಾಷೆ ಆದರೆ ಅದು ಎಂಥದೇ ಆಗಲಿ ಅವರಿಗೆ ತಿಳಿಯುವುದಿಲ್ಲ. ಅವರದಲ್ಲಿದ್ದ ಭಾಷೆಯಲ್ಲಿ ಶಿಕ್ಷಣ ಕೊಡಬೇಕು ಎನ್ನುವವರು. ಆ ಭಾಷೆಯ ವಾತಾವರಣವನ್ನು ಅವರ ಸುತ್ತಲೂ ಹರಡಬೇಕು. ಆ ಪ್ರಯತ್ನ ಬಹಳ ಕ್ಷತಕ. ಹುಡುಗರು ಬೆಳೆದಾಗ ಅವರಿಗೆ ಸ್ವತಂತ್ರ ಬುದ್ಧಿಯೇ ಇಲ್ಲದೆ ಹೋಗುತ್ತದೆ. ಆದ್ದರಿಂದಲೇ ಶಿಕ್ಷಣದಲ್ಲಿ ತಾಯಿನುಡಿಗೆ ಅಗ್ರಸ್ಥಾನ.

''ಯಾವ ವಿದೇಶಿ ಭಾಷೆಯೂ ಮಾತೃ ಭಾಷೆಯ ಸ್ಥಾನವನ್ನು ಪಡೆಯಲಾರದು. ಸ್ವತಂತ್ರವಾದ ಆಲೋಚನಾ ಪದ್ಧತಿ, ಸಂಕೀರ್ಣವಾದ ಭಾವಗಳ ಸಹಜವಾದ ಹಾಗೂ ಖಚಿತವಾದ ಅಭಿವ್ಯಕ್ತಿ ಸಾಮರ್ಥ್ಯಗಳು ಮಾತೃ ಭಾಷೆಯಲ್ಲಿಯೇ ಬೆಳೆಯಲು ಸಾಧ್ಯ 'ಇದು ಭಾರತೀಯ ಶಿಕ್ಷಣ ಮಾಧ್ಯಮದ ವಿಚಾರವಾಗಿ ವಿದೇಶಿಯನಾದ Professor H. Y. Langhor 1927ರಷ್ಟು ಹಿಂದೆಯೇ ಹೇಳಿದ ಮಾತು. ಮಹಾತ್ಮಗಾಂಧಿಯವರು ''ಭಾರತೀಯ ಮಗು ತನ್ನ ತಂದೆಗೆ ಇಂಗ್ಲೀಷಿನಲ್ಲಿ ಪತ್ರ ಬರೆಯುವುದನ್ನು ನೋಡಿದರೆ ನನ್ನ ಕಣ್ಣನಲ್ಲಿ ರಕ್ತಾಶ್ರುಗಳು ಸುರಿಯುತ್ತವೆ ಎಂದು ಉಸುರಿದರೂ ಇವು ಕೇವಲ ಭಾವೋದ್ವೇಗದ ಉದ್ಗಾರಗಳಲ್ಲ. ಭಾರತೀಯ ಶಿಕ್ಷಣ ಪದ್ಧತಿಯ ಬಗ್ಗೆ ಗಂಭೀರವಾಗಿ ಚಿಂತಿಸಿದ ಅನಂತರ ಕಂಡುಕೊಂಡ ಸತ್ಯಾಂಶಗಳು.

ಮಾತೃ ಭಾಷಾ ಮಾಧ್ಯಮವೇ ಶ್ರೇಷ್ಠ ಎಂದು ಶಿಕ್ಷಣ ತಜ್ಞರೂ ಒಪ್ಪಿಕೊಂಡಿದ್ದಾರೆ. ಮಾತೃ ಭಾಷೆ ಎಂದಾಗ ಎಷ್ಟೋ ಸಲ ದೇಶ ಭಾಷೆ ನೆರೆ ಹೊರೆಯ ಭಾಷೆ ಎಂದೂ ಆಗುವುದುಂಟು. ಅವರ ಭಾಷೆ ಬೋಧಕ ಭಾಷೆ ಆಗಬೇಕು. ಅಲ್ಲದೆ ಬೇರೆ ಯಾವುದು ಆದರೂ ಶಿಕ್ಷಣ ಸಾರ್ವತ್ರಿಕ ಆಗದು.

ತಮ್ಮ ತಮ್ಮ ತರಗತಿಗೆ ತಮ್ಮ ವಿದ್ಯಾರ್ಥಿಗಳಿಗೆ ತಾವೇ ಪಠ್ಯ ಪುಸ್ತಕವನ್ನು ಶಿಕ್ಷಕರು ತಯಾರು ಮಾಡಿಕೊಳ್ಳುವ ಕಾಲ ಯಾವಾಗ ಬರುತ್ತದೆಯೋ , ಆಗ ಮಾತ್ರ ಈ ಶಿಕ್ಷಣ ಸಮಸ್ಯೆ ಈ ಮಾಧ್ಯಮ ಸಮಸ್ಯೆ ಎಲ್ಲವೂ ದೂರ ಆಗುತ್ತವೆ. ಹುಡುಗರಿಗೆ ನೌಕರಿ ಸಿಗಬೇಕೆಂದು ವಿದ್ಯಾರ್ಥಿಗಳನ್ನು ತಂದೆ ತಾಯಿಗಳು ಶಾಲೆಗೆ ಕಳಿಸುತ್ತಾರೆ, ಎಂಬ ಅಪವಾದ ಇದೆ. ಇಂಥ ಮಾತು ನಮ್ಮಲ್ಲಿ ಬರಬಾರದು. ವ್ಯವಸಾಯ, ಕೈಗಾರಿಕೆ ಕಸುಬು ಎಲ್ಲವೂ ಹೊಟ್ಟೆ ತುಂಬ ಕೊಟ್ಟರೆ, ಕೈ ತುಂಬಾ ಕಾಸು ಕೊಟ್ಟರೆ ಅದಕ್ಕೆ ಹೋಗೋದಿಲ್ಲ ಅನ್ನೋರಾರು? ಆಗ ಶಿಕ್ಷಣ ಸಮಸ್ಯೆ ಮಾಧ್ಯಮ ಸಮಸ್ಯೆ ತಾನೇ ಬಿಡುತ್ತದೆ. ಶೀಘ್ರವಾಗಿ ಬೆಳೆಯುತ್ತಿರುವ ಜನ ಸಂಖ್ಯೆಗೆ ಜೀವನೋಪಾಯ ಕಲ್ಪಿಸುವುದು ಸರಕಾರದ ಸಮಸ್ಯೆ.

ಭಾಷೆ ತನ್ನ ಕಾರ್ಯಭಾರಗಳನ್ನು ಸರಿಯಾಗಿ ನಿರ್ವಹಿಸಬೇಕಾದರೆ ಅದರ ಪ್ರಯೋಜನ ಸಮಾಜಕ್ಕೆ ಲಭಿಸಬೇಕಾದರೆ, ಸಮಾಜ ಬೆಳೆಯಬೇಕಾದರೆ ಅದರ ಬಳಕೆಗೆ ಸಂಪೂರ್ಣ ಅವಕಾಶ ಇರಲೇಬೇಕು. ಒಂದು ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಆರಿಸಿಕೊಳ್ಳಬೇಕಾದರೆ ಅದು ಮುಖ್ಯವಾಗಿ ಮೂರು ಉದ್ದೇಶಗಳನ್ನು ಪೂರೈಸಬೇಕೆಂಬುದು ಶಿಕ್ಷಣ ತಜ್ಞರ ಅಭಿಪ್ರಾಯ ''ವಿದ್ಯಾರ್ಥಿಗಳು ಜ್ಞಾನವನ್ನು ಸಾಧ್ಯವಾದಷ್ಟು ಸುಲಭವಾಗಿ ಪಡೆದುಕೊಳ್ಳಲು ಅದರಿಂದ ಸಹಾಯವಾಗಬೇಕು. ಅವರು ತಮ್ಮ ಭಾವನೆಗಳನ್ನು ಸ್ಪಷ್ಟವಾಗಿ ಹೇಳಲು, ನಿಷ್ಪಕ್ಷವಾಗಿಯೂ ಆಲೋಚನೆ ಮಾಡಲು ಸಾಧ್ಯವಾಗಬೇಕು. ತಾಯಿ ನುಡಿಯ ಮೂಲಕ ಶಿಕ್ಷಣ ಪಡೆದಾಗಲೇ ಈ ಮೂರೂ ಉದ್ದೇಶಗಳೂ ಪೂರೈಸುತ್ತವೆ. ಪ್ರದೇಶ ಭಾಷೆಯೇ ಶಿಕ್ಷಣ ಮಾಧ್ಯಮವಾಗದೆ ಶಿಕ್ಷಣ ಸುಧಾರಣೆ ಎಂದೂ ಸಾಧ್ಯವಾಗಲಾರದು. ಭಾರತದಂಥ ರಾಷ್ಟ್ರದ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದಲೂ ಇದು ಅಗತ್ಯ. ಮಗುವಿನ ತಂದೆ ತಾಯಿಯರದಲ್ಲದ ಭಾಷೆಯಲ್ಲಿ ಅವನಿಗೆ ಶಿಕ್ಷಣ ನೀಡುವುದರಿಂದ ಆ ಮಗುವನ್ನು ತನ್ನ ತಂದೆ ತಾಯಿಯವರಿಂದ ವಿಮುಖಗೊಳಿಸಿದಂತಾಗುತ್ತದೆ.

ಒಬ್ಬ ಮನುಷ್ಯನ ಸ್ವಂತ ಅಭಿವ್ಯಕ್ತಿ ಸಾಧನೆಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಿ ಕೊಡುವುದು ಭಾಷೆಯ ಎರಡನೆಯ ಕಾರ್ಯಭಾರ. ಪರಿಸರ ಒಡ್ಡುವ ಪ್ರಚೋದನೆಗೆ ವ್ಯಕ್ತಿಯ ಪರಿವರ್ತನೆಯ ನಾನಾ ವಿಧಾನಗಳಲ್ಲಿ ಭಾಷೆಯೂ ಒಂದು. ಸಮಾಜದೊಂದಿಗೆ ಅನನ್ಯ ಸಂಬಂಧ ಪಡೆಯಬಯಸುವ ವ್ಯಕ್ತಿಗೆ ಭಾಷೆಗಿಂತ ಉತ್ತಮವಾದ ಸಾಧನ ಇನ್ನೊಂದಿಲ್ಲ. ಸಮಾಜದ ಭಾಷೆಗೂ ಅವನ ಭಾಷೆಗೂ ಸಂಪೂರ್ಣ ಸಾಮ್ಯ ಏರ್ಪಟ್ಟಾಗ ವ್ಯಕ್ತಿಯ ಅಭಿವ್ಯಕ್ತಿ ಸಂಪೂರ್ಣ ಸಫಲವಾಗುತ್ತದೆ. ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ವಿಭಿನ್ನ ಭಾಷೆಗಳಿದ್ದಷ್ಟೂ ಅದರ ಸಮಗ್ರತೆಗೆ ಕುಂದುಂಟಾಗುತ್ತದೆ. ಭಾಷೈಕ್ಯ ಸಾಧಿಸದೆ ಹೋಗುತ್ತದೆ.

ವ್ಯಕ್ತಿ ತನ್ನ ಸ್ವಂತ ಭಾವನಾತ್ಮಕ ಪ್ರಕ್ರಿಯೆಗಳನ್ನು ಶೋಧಿಸಲೂ ವಿಶ್ಲೇಷಿಸಲೂ ಭಾಷೆ ಅಗತ್ಯವಾದ ಉಪಕರಣವಾಗಿದೆ. ನಮ್ಮ ಆಲೋಚನೆಗಳನ್ನು ಸುಸಂಗತವಾಗಿ ಕ್ರಮಗೊಳಿಸಲು ಅದು ಸಹಾಯಕವಾಗಿದೆಯಷ್ಟೇ ಅಲ್ಲದೆ ನಮ್ಮ ಸಮಾಜದ ಪ್ರಸಕ್ತ ಹಾಗೂ ಗತ ಕಾಲದ ಆಲೋಚನಾಭ್ಯಾಸಗಳನ್ನು ಅದು ನಮ್ಮ ಮೇಲೆ ಹೊರಿಸುತ್ತದೆ. ಭಾಷೆ ಒಂದು ಸಂಪರ್ಕದ ಮಾಧ್ಯಮವಾಗಿಯೂ ಪಾತ್ರವಹಿಸುತ್ತದೆ. ವ್ಯಕ್ತಿ ತನ್ನ ಭಾಷೆಯನ್ನು ಕಲಿಯುವುದು ಸಮಾಜದಿಂದ. ತಾನು ಕಂಡದ್ದನ್ನು ತಿಳಿಸಬೇಕಾದರೆ ಅವನು ಸಮಾಜಕ್ಕೆ ಅರ್ಥವಾಗುವ ಭಾಷೆಯನ್ನೇ ಬಳಸಬೇಕು. ಪ್ರಜಾಪ್ರಭುತ್ವ ಜೀವಂತವಾಗಿರುವುದು ಇಂಥ ಸನ್ನಿವೇಶದಲ್ಲಿ ಮಾತ್ರ. ನಮ್ಮ ಭಾಷೆಯನ್ನು ಬಳಸುವುದರಲ್ಲಿ ಎಷ್ಟೇ ತೊಂದರೆಗಳಿರಲಿ ಅನ್ಯ ಭಾಷೆಯ ಬದಲು ಅದನ್ನೇ ಬಳಸುವುದು ಪ್ರಜಾಪ್ರಭುತ್ವದ ಉಳಿವಿಗೆ ಅಗತ್ಯ.

ಭಾಷೆ ಪ್ರಥಮತಃ ಸಂಪರ್ಕಸಾಧನವಲ್ಲ. ಅದು ಮೂಲತಃ ಜನರ ಸಹಭಾಗಿತ್ವ ಸಾಧನ, ಭಾವೈಕ್ಯ ಸಾಧನ. ಇತರರೊಂದಿಗೆ ಸಹಭಾಗಿಯಾಗ ಬಯಸುವುದು ಸಂಘ ಜೀವಿ ಮಾನವನ ಸಹಜ ಪ್ರವೃತ್ತಿ. ಬೆಳಗ್ಗೆ ಎದುರಾದ ಪರಿಚಿತನಿಗೆ ಸ್ವಂತ ಭಾಷೆಯಲ್ಲಿ ವಂದನೆ ಹೇಳಿ ಪ್ರತಿ ವಂದನೆ ಪಡೆಯುವುದು ಪರಸ್ಪರ ಕೈ ಕುಲುಕಿದ ಅನುಭವವನ್ನೇ ತರಬಲ್ಲುದು. ಒಬ್ಬರು ಇನ್ನೊಬ್ಬರೊಂದಿಗೆ ಮಾತಾಡಬೇಕೆಂದು ಬಯಸುವುದು ಇನ್ನೊಬ್ಬರ ಪ್ರೇಮಕ್ಕಾಗಿ ಹಾತೊರೆಯುವಷ್ಟೇ ಉತ್ಕಟವಾಗಿರುತ್ತದೆ. ಸ್ವಂತ ಭಾಷೆಯೇ ಅತ್ಯಂತ ಜರೂರಾಗಿ ಆಡಳಿತ ಶಿಕ್ಷಣ ಮಾಧ್ಯಮವಾಗಬೇಕೆನ್ನುವುದಕ್ಕೆ ಇದಕ್ಕಿಂತ ಮಹತ್ವದ ಕಾರಣ ನೀಡಬೇಕಾದ ಅಗತ್ಯವಿಲ್ಲ. ಇದು ಸಂಘ ಜೀವಿ ಮಾನವನ ಸಹಜ ಪ್ರವೃತ್ತಿಯ ಪೂರೈಕೆ.

ದೇಶೀಯ ವಲ್ಲದ ಭಾಷೆಯಲ್ಲಿ ಅವನಿಗೆ ಶಿಕ್ಷಣ ನೀಡುವುದರಿಂದ ಅವನ ದೇಶದ ಸಂಸ್ಕೃತಿಯಿಂದ ಅವನನ್ನು ವಿಮುಖಗೊಳಿಸಿದ ಹಾಗಾದೀತು ಶಾಲಾ ಕೊಠಡಿಗೆ ಒಂದು ಭಾಷೆ, ಅದರ ಹೊರಗಿನ ಜಗತ್ತಿಗೆ ಒಂದು ಭಾಷೆ ಇವುಗಳೊಂದಿಗೆ ಅವನು ಬೆಳೆದರೆ ದ್ವಂದ್ವ ವ್ಯಕ್ತಿತ್ವ ಬೆಳಸಿಕೊಳ್ಳುತ್ತಾನೆ. ಶಾಲೆಯಲ್ಲಿ ಕಲಿತ ವಿಚಾರಗಳಿಂದಲೂ ಪಡೆದ ತರಬೇತಿಯಿಂದಲೂ ಬೆಳೆದ ಅವನ ವ್ಯಕ್ತಿತ್ವ ಒಂದು ಬಗೆಯ ಭಾಷಿಕ polythene ಚೀಲದಲ್ಲಿ ಬಂಧಿತವಾಗುತ್ತದೆ. ದಿನದಿನದ ಸಾಮಾಜಿಕ, ನೈತಿಕ ತೀರ್ಮಾನಗ ಳನ್ನು ಕೈಗೊಳ್ಳಬೇಕಾದ ಕ್ಷೇತ್ರದಿಂದ ಅದು ಪ್ರತ್ಯೇಕವಾಗಿರುತ್ತದೆ. ಆ ಕ್ಷೇತ್ರಕ್ಕೆ ಉಪಯೋಗವಾಗದೇ ಹೋಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ತನ್ನ ಸ್ವಂತ ಪರಿಸರದಲ್ಲಿ ಕ್ರಿಯಾತ್ಮಕವಾಗಿ ಪ್ರತಿವರ್ತಿಸುವ ಒಬ್ಬ ಬಾಲಕ ತನ್ನ ಶಾಲೆಯಲ್ಲಿ ಜಾಣಗಿಣಿಯಂತೆ ಅಷ್ಟೇ ಚೆನ್ನಾಗಿ ಪ್ರತಿವರ್ತಿಸಲಾರ. ವಿದೇಶಿ ಮಾಧ್ಯಮದ ಮೂಲಕ ಶಿಕ್ಷಣ ನೀಡುವುದರಿಂದ ಒಂದು ಬಗೆಯ ಸಮಯ ಸಾಧಕರನ್ನು ಸೃಷ್ಟಿಸಿದಂತಾಗುತ್ತದೆ. ಇವರು ಕಲಿತಿದ್ದಕ್ಕೆ ಪ್ರತಿಯಾಗಿ ತಮ್ಮ ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಲು ಸಿದ್ಧರಿರುವುದಿಲ್ಲ. ಬ್ರಿಟಿಷ್ ಕಾಮನ್‌ವೆಲ್ತ್‌ನಿಂದ ಹೊಸದಾಗಿ ವಿಮೋಚನೆಗೊಂಡ ಪ್ರದೇಶಗಳಲ್ಲಿ ಬೆಳೆದಿರುವ ಇಂಗ್ಲೀಷ್ ಮಾಧ್ಯಮಗಳ ಅಧ್ಯಾಪಕರು ಈ ಸಮಸ್ಯೆಯನ್ನೆ ಸುಧಾರಿಸಬೇಕಾಗಿ ಬಂತು. ಸ್ಥಳೀಯ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂಬುದಕ್ಕೆ ಪ್ರಬಲವಾದ ವಾದವಿದು.

ಇಂದು ನಮ್ಮ ದೇಶದ ಮನಸ್ಸನ್ನು ಕುದಿಸುತ್ತಿರುವ ಸಮಸ್ಯೆಗಳಲ್ಲಿ ಭಾಷಾ ಸಮಸ್ಯೆಯೂ ಒಂದು ಪ್ರಮುಖಸ್ಥಾನ ಪಡೆದಿದೆ. ಪ್ರಾದೇಶಿಕ ದೃಷ್ಟಿಯಿಂದ, ಅಖಿಲ ಭಾರತೀಯ ದೃಷ್ಟಿಯಿಂದ, ಅಂತರರಾಷ್ಟ್ರೀಯ ದೃಷ್ಟಿಯಿಂದ ಜ್ಞಾನಾರ್ಜನೆಯ ದೃಷ್ಟಿಯಿಂದ ವಿದ್ಯಾಪ್ರಸಾರದ ದೃಷ್ಟಿಯಿಂದ, ನಾನಾ ದೃಷ್ಟಿಗಳಿಂದ ವಿವಿದಾಭಿಪ್ರಾಯಗಳು ರಣರಂಗದಲ್ಲಿ ತುಮುಲ ಯುದ್ಧ ಹೂಡಿದಂತಿದೆ. ಆಯಾ ಪ್ರದೇಶದ ದೇಶ ಭಾಷೆಗೆ ಅಲ್ಲಲ್ಲಿ ಪ್ರಾಧಾನ್ಯವಿರಬೇಕೆನ್ನುವರು ಕೆಲವರು, ಅಖಿಲ ಭಾರತೀಯವೆಂದು ಒಪ್ಪಿಕೊಂಡಿರುವ ಸಂಯುಕ್ತ ಭಾಷೆಗೆ ಪ್ರಥಮ ಸ್ಥಾನವಿರಬೇಕು ಎನ್ನುವವರು ಕೆಲವರು. ಸರ್ವವಿದ್ಯಾಶಾಸ್ತ್ರಗಳಿಗೂ ಆಗರವಾಗಿ ವ್ಯಾವಹಾರಿಕ ದೃಷ್ಟಿಯಿಂದಲೂ ಅಂತರ ರಾಷ್ಟ್ರೀಯವಾಗಿರುವ ಇಂಗ್ಲೀಷ್ ಭಾಷೆಗೆ ಪ್ರಥಮ ಸ್ಥಾನವಿರಬೇಕೆಂದು ಕೆಲವರು.

ಈ ವಿಚಾರ ಮಂಥನ ನಿನ್ನೆ ಮೊನ್ನೆಯದಲ್ಲ ಸ್ವಯಂ ಗಾಂಧೀಜಿಯವರೇ ಇವುಗಳನ್ನು ಕೂಲಂಕುಷವಾಗಿ ಚರ್ಚಿಸಿ ತಮ್ಮ ನಿರ್ಧಾರಗಳನ್ನು ಸಕಾರಣವಾಗಿ ವಾದಿಸಿ ನಾಡಿನ ಮುಂದೆ ಇಟ್ಟು ಹೋಗಿದ್ದಾರೆ. ಅಲ್ಲದೆ ದೇಶ ವಿದೇಶಗಳ ತಜ್ಞರೂ ಮನಶಾಸ್ತ್ರೀಯವಾಗಿ ಪರಿಶೀಲಿಸಿ ತಮ್ಮ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ನಾಡಿನ ಅಗ್ರಗಣ್ಯ ದೇಶ ಭಕ್ತರೂ ತಮ್ಮಗಿಷ್ಟ ವಾದ ನಿರ್ಣಯಗಳನ್ನು ಆಗಿದ್ದಾಂಗೆ ಘೋಷಿಸುತ್ತಾ ಬಂದಿದ್ದಾರೆ. ಈ ವಿಚಾರವಾಗಿ ಇನ್ನು ಸಾಕು ಎಂಬಷ್ಟು ಚರ್ಚೆ ನಡೆದಿದೆ. ಈ ಸಮಸ್ಯೆ ವಾದ ಪ್ರತಿ ವಾದದ ಎಲ್ಲೆ ದಾಟಿ ಇತ್ಯರ್ಥ ಸೀಮೆಯನ್ನು ಮುಟ್ಟಿದೆ ಎನ್ನಬಹುದು.

ಒಟ್ಟಿನಲ್ಲಿ ಆಯಾ ಪ್ರಾಂತಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಿಗೆ ಪ್ರಥಮ ಸ್ಥಾನ ಸಲ್ಲಬೇಕು. ಅಂತರಪ್ರಾಂತೀಯ ವ್ಯವಹಾರ ದೃಷ್ಟಿಯಿಂದ ಮತ್ತು ಕೇಂದ್ರದ ಆಡಳಿತ ದೃಷ್ಟಿಯಿಂದ ಅಖಿಲಭಾರತೀಯ ವಾದ ಸಂಯುಕ್ತ ಭಾಷೆಗೆ ಎರಡನೆ ಸ್ಥಾನ ಕೊಡಬೇಕು. ಅಂತರಾಷ್ಟ್ರೀಯ ವಾದ ಭಾಷೆಗೆ ಅಥವಾ ಭಾಷೆಗಳಿಗೆ ಐಚ್ಛಿಕ ಸ್ಥಾನ ಕೊಡಬೇಕು. ಅಲ್ಲಿಯ ಶಿಕ್ಷಣ ಎಲ್ಲ ಮಟ್ಟಗಳಲ್ಲಿಯೂ ದೇಶ ಭಾಷಾ ಮಾಧ್ಯಮದಲ್ಲಿಯೇ ಸಾಗಬೇಕು.

ನಮಗೆ ಎಷ್ಟು ಇಂಗ್ಲೀಷ್‌ಬೇಕು?

ಇಂಗ್ಲೀಷ್ ಭಾಷೆಯ ಯೋಗ್ಯತೆ, ಅದರ ವ್ಯಾಪ್ತಿ ಅದರಿಂದೊದಗುವ ಪ್ರಜ್ಞಾ ವೈಶಾಲ್ಯ, ಅದು ನಮ್ಮಲ್ಲಿ ಪ್ರಚೋದಿಸಿರುವ ವಿಚಾರ ಬುದ್ಧಿ ಅದರಿಂದ ಮುಂದೆ ಎಂದೆಂದಿಗೂ ನಮಗೆ ಲಭಿಸಲಿರುವ ಸಂಪರ್ಕ ಸಹಾಯ ಮೊದಲಾದುವುಗಳನ್ನೆಲ್ಲಾ ಅರಿತವರಾರೂ ಬ್ರಿಟಿಷರನ್ನು ಓಡಿಸಿದಂತೆ ಇಂಗ್ಲೀಷ್ ಭಾಷೆಯನ್ನು ಓಡಿಸಬೇಕೆಂದು ಹೇಳುವ ಅವಿವೇಕಕ್ಕೆ ಹೋಗಲಾರರು. ಆದ್ದರಿಂದ ಇಂಗ್ಲೀಷ್ ನಮ್ಮೊಡನೆ ಉಳಿಯಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರುವುದಕ್ಕೆ ಅವಕಾಶವೇ ಇಲ್ಲ.

ಇಂಗ್ಲೀಷ್ ಉಳಿಯಬೇಕೆಂದು ನಿಶ್ಚಯಿಸಿದ ಮೇಲೆ ನಮ್ಮ ಮುಂದೆ ಏಳುವ ಪ್ರಶ್ನೆ ಅದು ಯಾವ ರೂಪದಲ್ಲುಳಿಯ ಬೇಕು? ಯಾವ ಪ್ರಮಾಣದಲ್ಲಿ? ಯಾರಿಗೆ? ಏತಕ್ಕೆ ಯಾವ ಯಾವ ಉದ್ದೇಶಗಳಿಗಾಗಿ?

ಇಂಡಿಯಾಕ್ಕೆ ಇಂಗ್ಲೀಷ್ ಬಂದದ್ದು ಮುಖ್ಯವಾಗಿ ರಾಜಕೀಯ ಕಾರಣಗಳಿಂದಾಗಿ, ಅದನ್ನು ಅಧಿಕಾರಿ ಭಾಷೆಯೆಂದು ಘೋಷಿಸಿ ಕಡ್ಡಾಯವಾಗಿ ಅದನ್ನೆಲ್ಲರೂ ಕಲಿಯಬೇಕೆಂದು ವಿಧಿಸಿದುದು ಅದೇ ಕಾರಣಕ್ಕಾಗಿ. ಆದರೆ ಈಗ ನಮ್ಮ ರಾಜಕೀಯ ಪರಿಸ್ಥಿತಿ ಬದಲಾಗಿದೆ. ಹೊಸ ಪರಿಸ್ಥಿತಿಯಲ್ಲಿ ಇಂಗ್ಲೀಷಿಗೆ ಸಲ್ಲ ಬೇಕಾದ ಸ್ಥಾನ ಯಾವುದು?

ಇಂಗ್ಲೀಷ್ ಕಲಿಯುವವರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು. ಭಾಷಾ ದೃಷ್ಟಿಯಿಂದ ಕಲಿಯುವವರು, ಸಾಹಿತ್ಯ ದೃಷ್ಟಿಯಿಂದ ಕಲಿಯುವವರು, ಭಾಷಾ ದೃಷ್ಟಿಯಿಂದ ಕಲಿಯುವವರಿಗೆ ಇಂಗ್ಲೀಷಿನ ಪರಿಚಯ ಚೆನ್ನಾಗಿ ಆಗಬೇಕು. ಅವರು ಆ ಭಾಷೆಯಲ್ಲಿ ಚೆನ್ನಾಗಿ ಓದಲೂ, ಬರೆಯಲೂ ಮಾತನಾಡಲೂ ಭಾಷಣ ಮಾಡಲೂ ಬಲ್ಲವರಾಗಬೇಕು. ಅಪರೂಪವಾಗಿ ಅಂತರ್‍ರಾಷ್ಟ್ರೀಯ ಪ್ರಪಂಚಕ್ಕೆ ಸಾಹಿತ್ಯದಲ್ಲಿ, ಶಾಸ್ತ್ರದಲ್ಲಿ ರಾಜಕೀಯದಲ್ಲಿ ಸಂಪರ್ಕ ಕಲ್ಪಿಸುವ ಸಾಧನಗಳಾಗಬೇಕು. ಇಂಥವರಿಗೆ ವಿದ್ಯಾಭ್ಯಾಸದ ಮೇಲಿನ ಮಟ್ಟದಲ್ಲಿ ವಿಶೇಷವಾಗಿ ಸಾಹಿತ್ಯ ವಿಷಯಗಳಲ್ಲಿ ಇಂಗ್ಲೀಷ್ ಶಿಕ್ಷಣ ಮಾಧ್ಯಮವಾಗಿದ್ದರೆ ಲೇಸು. ಏಕೆಂದರೆ ಅವರ ಉದ್ದೇಶವೇ ಆ ಭಾಷೆಯಲ್ಲಿ ಉದ್ದಾಮ ಪಾಂಡಿತ್ಯ ಸಂಪಾದನೆ ಆದರೆ ಇಂಗ್ಲೀಷನ್ನು ಇದರ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರು ಆ ಭಾಷೆಯಲ್ಲಿ ಮಾತನಾಡುವುದನ್ನು ಅಭ್ಯಾಸ ಮಾಡಬೇಕಾಗಿಲ್ಲ. ಅದರಲ್ಲಿ ಬರೆಯುವುದಕ್ಕೂ ಶ್ರಮಿಸಬೇಕಾಗಿಲ್ಲ, ಅದನ್ನು ಓದಿ ಅರಿಯಬೇಕಾದಷ್ಟೋ ಅಷ್ಟೆ. ಆದ್ದರಿಂದ ಅವರು ಇಂಗ್ಲೀಷ್ ಸಾಹಿತ್ಯವನ್ನು ದೇಶ ಭಾಷಾ ಮಾಧ್ಯಮದ ಮೂಲಕವೇ ಅಭ್ಯಾಸ ಮಾಡಿದರೆ ಅದರ ರಸ ಸತ್ವ ಸುಲಭವಾಗಿ ಶೀಘ್ರವಾಗಿ ಜೀರ್ಣವಾಗಿ ರಕ್ತಗತವಾಗುತ್ತದೆ ಎಲ್ಲ ದೇಶಗಳಲ್ಲಿಯೂ ಪರಭಾಷೆಯ ಸಾಹಿತ್ಯವನ್ನು ಸ್ವಭಾಷೆಯ ಮೂಲಕ ಕಲಿಯುವುದೇ ರೂಢಿ. ಸಹಜ ರೀತಿ. ಏಕೆಂದರೆ ಅವರ ಉದ್ದೇಶ ಅಪರ ಭಾಷೆಯಲ್ಲಿ ಬರೆಯುವ, ಮಾತಾಡುವ ಪಾಂಡಿತ್ಯ ಸಂಪಾದನೆಯಲ್ಲ, ಅದರ ಸಾಹಿತ್ಯದ ಸತ್ವದ ಆಸ್ವಾದನೆ ಮಾತ್ರ. ನಮ್ಮ ದೇಶದಲ್ಲಿ ಪರಕೀಯರ ಸೌಕರ್ಯಾರ್ಥವಾಗಿ ಬರೆದು ಮಾತಾಡುವುದಕ್ಕಾಗಿಯೇ ನಮ್ಮ ವಿದ್ಯಾಭ್ಯಾಸ ಏರ್ಪಟ್ಟುದುದರಿಂದ ನಾವು ಪರಭಾಷಾ ಸಾಹಿತ್ಯವನ್ನು ಆ ಭಾಷಾ ಮಾಧ್ಯಮದಿಂದಲೇ ಕಲಿಯಬೇಕಾಯಿತು. ಮೊದಲಿನಿಂದಲೂ ಆ ಸಾಹಿತ್ಯವನ್ನು ನಮ್ಮ ಭಾಷೆಯ ಮಾಧ್ಯಮದಿಂದಲೇ ಕಲಿಸಿದ್ದರೆ ನಮ್ಮವರಿಗೆ ಈಗ ಒದಗಿರುವ ರಸಪುಷ್ಟಿಗಿಂತಲೂ ಸಾವಿರ ಪಾಲು ಹೆಚ್ಚಿನ ರಸಪುಷ್ಟಿ ಒದಗುತ್ತಿತ್ತು.

ಇಂಗ್ಲೀಷನ್ನು ಅದರ ಪ್ರಥಮ ಭಾಷಾ ಸ್ಥಾನದಿಂದ ದ್ವಿತೀಯ ಸ್ಥಾನಕ್ಕೆ ಇಳಿಸಿ ಪ್ರಾದೇಶಿಕ ಭಾಷೆಯನ್ನು ಪ್ರಥಮ ಸ್ಥಾನಕ್ಕೇರಿಸಿ ಪ್ರಥಮ ಭಾಷೆಯ ಮೂರು ಪ್ರತ್ಯೆ

(ಪುಟ 12ಕ್ಕೆ)

೨೩

# ರಂಗನ ಮದುವೆ

ಈ ಹೆಸರನ್ನೋದಿ ''ಇದೇನು? 'ರಂಗನ ಮದುವೆ' ಎನ್ನುವ 'ರಂಗನಾಥ ವಿವಾಹ' 'ರಂಗನಾಥ ವಿಜಯ' ಎನ್ನಬಾರದೆ?'' ಎಂದು ನೀವು ಯಾರಾದರೂ ಕೇಳಬಹುದು. ಅಹುದು; ''ಜಗನ್ನಾಥ ವಿಜಯ'', ''ಗಿರಿಜಾ ಕಲ್ಯಾಣ'', ಎನ್ನುವ ಹಾಗೇ ''ಶ್ರೀ ರಂಗನಾಥ ವಿಜಯ'', ಅಥವಾ ಅದರಂತೆ ಇರುವ ಬಾಯಿತುಂಬ ಬರುವ ಒಂದು ಹೆಸರನ್ನು ನಾನು ಇಡಬಹುದಾಗಿತ್ತು. ಅದು ನನಗೆ ತಿಳಿಯದೆ ಇಲ್ಲ. ಆದರೆ, ನೋಡಿ; ಇದು ಜಗನ್ನಾಥನ ವಿಜಯವೂ ಅಲ್ಲ; ಗಿರಿಜೆಯ ಕಲ್ಯಾಣವೂ ಅಲ್ಲ; ನಮ್ಮೂರಿನ ನಮ್ಮ ರಂಗನ ಮದುವೆಯ ವಿಷಯ. ಆದುದರಿಂದ ಆ ರೀತಿಯ ಹೆಸರನ್ನಿಡಲಿಲ್ಲ.

ನಮ್ಮೂರು ಹೊಸಹಳ್ಳಿ, ಅದರ ಹೆಸರನ್ನು ನೀವು ಕೇಳಿರುವಿರಲ್ಲವೆ? ಇಲ್ಲವೆ? ಅಯ್ಯೋ ಪಾಪ. ಅದು ನಿಮ್ಮ ತಪ್ಪಲ್ಲ. ಭೂವಿವರಣೆಗಳಲ್ಲಿ ಅದರ ಹೆಸರು ಇಲ್ಲ. ಇಂಗ್ಲೆಂಡ್ ದೇಶದಲ್ಲಿದ್ದುಕೊಂಡು ಇಂಗ್ಲೀಷಿನಲ್ಲಿ ಭೂವಿವರಣೆ ಬರೆಯುವ ಸಾಹೇಬು ಜನಗಳಿಗೆ ಹೊಸಹಳ್ಳಿ ಗೊತ್ತಿಲ್ಲದೆ, ಅವರು ಸುಮ್ಮನಿದ್ದರೂ ಇರಬಹುದು. ನಮ್ಮ ಜನರೂ ಭೂವಿವರಣೆ ಬರೆಯುವಾಗ ಹೊಸಹಳ್ಳಿಯ ಹೆಸರನ್ನೇ ಮರೆಯುವರು. ಸರಿ ಕುರಿ ಹಿಂದಿನ ಸಮಾಚಾರ. ಒಂದು ಹಳ್ಳಕ್ಕೆ ಬಿದ್ದರೆ, ಎಲ್ಲವೂ ಒಂದರ ಹಿಂದೆ ಒಂದು ಕಣ್ಣು ತೆರೆದುಕೊಂಡೇ ಬೀಳುವವು. ಇಂಗ್ಲೆಂಡಿನ ಸಾಹೇಬರೂ ನಮ್ಮ ಗ್ರಂಥಕರ್ತರೂ ಮರೆತ ಮೇಲೆ, ಪಾಪ, ಭೂಪಟ ಬರೆಯುವವನು ಅದನ್ನು ನೆನೆಯುವನೇ? ನಕ್ಷೆಯಲ್ಲಿ ನಮ್ಮೂರಿನ ನೆಲೆಯೇ ಇಲ್ಲ.

ಎಲ್ಲಿಯೋ ಪ್ರಾರಂಭಿಸಿ, ಏನೋ ಹೇಳುತ್ತಾ ಬಂದೆ. ಕ್ಷಮಿಸಿ. ಭರತ ವರ್ಷದಲ್ಲಿ ಮೈಸೂರು ದೇಶ ಊಟದಲ್ಲಿ ಕರಿಗಡುಬಿನ ಹಾಗೆ. ಮೈಸೂರು ದೇಶದಲ್ಲಿ ಹೊಸಹಳ್ಳಿ ಕರಿಗಡುಬಿನೊಳಗಣ ಹೂರಣದ ಹಾಗೆ. ಈ ಎರಡು ವಿಷಯಗಳೂ ನಿಸ್ಸಂಶಯವಾಗಿಯೂ ನಿಜವಾದುವು. ನೀವು ನೂರು ಮಾತು ಹೇಳಬಹುದು; ನಾನೇನೂ ಬೇಡವೆನ್ನುವುದಿಲ್ಲ. ಆದರೆ ಈ ಮಾತು ಮಾತ್ರ ನಿಜ. ಹೊಸಹಳ್ಳಿಯನ್ನು ಹೊಗಳುವವನು ನಾನೇ ಅಲ್ಲ. ನಮ್ಮ ಊರಿನಲ್ಲಿ ಒಬ್ಬ ವೈದ್ಯರು ಇರುವರು; ಅವರ ಹೆಸರು ಗುಂಡಾಭಟ್ಟರು. ಅವರೂ ಹೀಗೆಯೇ ಹೇಳುವರು. ಅವರು ಸ್ವಲ್ಪ ಸೀಮೆಯನ್ನು ಸುತ್ತಿದವರು. ಎಂದರೆ ಇಂಗ್ಲೆಂಡಿಗೆ ಹೋದವರಂತೆ ಅಲ್ಲ. ''ನೀವು ಇಂಗ್ಲೆಂಡಿಗೆ ಹೋಗಿರುವಿರಾ?'' ಎಂದು ಯಾರಾದರೂ ಕೇಳಿದರೆ, ''ಇಲ್ಲ; ಅಣ್ಣಯ್ಯಗಳಿರಾ ! ಅದನ್ನು ನಿಮಗೇ ಬಿಟ್ಟಿರುವೆನು. ಇದ್ದ ಕಡೆ ಅರಲಾರದೆ. ತೊಂಚಿ ಹೊಕ್ಕ ನಾಯಿಯಂತೆ ಅಲೆಯುವುದು ನಿಮಗೇ ಇರಲಪ್ಪ! ನಾನೆಲ್ಲೋ ಸ್ವಲ್ಪ ಸೀಮೆ ಸುತ್ತಿದೇನೆ'' ಎಂದು ಹೇಳುವರು. ಆದರೆ ಬೇಕಾದಷ್ಟು ಊರು ನೋಡಿದ್ದಾರೆ.

ನಮ್ಮ ಊರ ಮುಂದೆ ಇರುವ ತೋಪಿನಲ್ಲಿ ಕೆಲವು ಮಾವಿನ ಮರ ಇವೆ. ಒಂದು ದಿನ ನೀವು ನಮ್ಮೂರಿಗೆ ಬನ್ನಿ. ಒಂದು ಕಾಯನ್ನು ಕೊಡುವೆನು. ತಿನ್ನಿ. ತಿನ್ನುವುದು ಬೇಡ: ಸುಮ್ಮನೆ ಕಡಿಯಿರಿ; ಹುಳಿ ಬ್ರಹ್ಮರಂಧ್ರಕ್ಕೇರುವುದು. ನಾನೊಂದು ಸಲ ಆ ಕಾಯನ್ನು ತಂದೆನು. ಚಟ್ನಿ ಮಾಡಿದ್ದರು. ಎಲ್ಲರೂ ತಿಂದೆವು. ಸಾಲಾಗಿ ಎಲ್ಲರಿಗೂ ಕೆಮ್ಮು ಬರಬೇಕೆ? ಔಷಧಿಯನ್ನು ಕೇಳಲು ವೈದ್ಯರ ಬಳಿಗೆ ಹೋಗಿದ್ದೆ. ಆಗ ಅವರು ಈ ಮಾತನ್ನು ಹೇಳಿದರು.

ಈ ಮಾವಿನಕಾಯಿ ಹೇಗೆ ಶ್ರೇಷ್ಠವೊ, ನಮ್ಮ ಊರಿನ ಹತ್ತಿರವಿರುವುದೆಲ್ಲ ಹಾಗೆಯೇ ಶ್ರೇಷ್ಠ. ನಮ್ಮೂರಿನ ಕೊಳದಲ್ಲಿರುವ ನೀರು ಎಷ್ಟೋ ಚೆನ್ನಾಗಿದೆ. ಅದರ ಮಧ್ಯೆ ತಾವರೆಯ ಬಳ್ಳಿ ಬೆಳೆದುಕೊಂಡಿದೆ. ನೋಡುವುದಕ್ಕೆ ಪುಷ್ಪಗಳು ಬಹು ರಮ್ಯವಾಗಿವೆ. ಊಟಕ್ಕೆ ಎಲೆ ಇಲ್ಲದಿದ್ದರೆ, ಮಧ್ಯಾಹ್ನದ ವೇಳೆ ಸ್ನಾನಕ್ಕೆ ಹೋದಾಗ ಎರಡೆಲೆ ತಂದರಾಯಿತು, ಎಲೆಯನ್ನು ಹಚ್ಚುವ ಕಷ್ಟವೇ ಇಲ್ಲ ! ಏನೇನೋ ಹೇಳುವೆನೆನ್ನುವಿರಿ. ನಮ್ಮೂರಿನ ಮಾತನ್ನೆತ್ತಿದರೇನೇ ಹಾಗೆ. ಹೋಗಲಿ; ಇಷ್ಟು ಸಾಕು. ನೀವು ಯಾರಾದರೂ ನೋಡಲಪೇಕ್ಷಿಸಿದರೆ ಬರಲು ಇಷ್ಟವಿದ್ದರೆ, ನನಗೆ ಒಂದು ಕಾಗದ ಬರೆಯಿರಿ. ನಾನು ಹೊಸಹಳ್ಳಿ ಎಲ್ಲಿದೆ ಏನು ಹೇಗೆ ಎಂಬುದನ್ನು ಬರೆಯುವೆನು. ನೀವು ಆಮೇಲೆ ಬರಬಹುದು. ಯಾವುದನ್ನಾದರೂ ಕಣ್ಣಾರೆ ನೋಡುವುದೇ ಮೇಲಲ್ಲವೆ?

ನಾನು ಹೇಳುವುದು ಈಗ ಹತ್ತು ವರ್ಷದ ಹಿಂದಿನ ಮಾತು. ಆಗ ನಮ್ಮ ಊರಿನಲ್ಲಿ ಇಂಗ್ಲೀಷು ಓದಿದವರು ಬಹು ಜನ ಇರಲಿಲ್ಲ. ಕರಣಿಕರೇ ಮೊದಲು ಧೈರ್ಯ ಮಾಡಿ ಮಗನನ್ನು ಬೆಂಗಳೂರಿಗೆ ಕಳುಹಿಸಿದ್ದರು. ಈಗ ಏನು, ಬಹು ಜನರಿದ್ದಾರೆ. ರಜಾ ದಿನದಲ್ಲಂತೂ, ಬೀದಿ ಬೀದಿಯಲ್ಲೆಲ್ಲಾ ಹುಡುಗರು ಇಂಗ್ಲೀಷು ಮಾತನ್ನೇ ಆಡಿಕೊಳ್ಳುವರು. ಆಗ ನಮ್ಮೂರಿನಲ್ಲಿ ಈ ಕೇಮುಬಾಮು ಮಾತು ಇರಲೇ ಇಲ್ಲ. ಜನ ಕನ್ನಡದಲ್ಲಿ ಮಾತನ್ನಾಡುವಾಗಲೂ ಇಂಗ್ಲೀಷು ಮಾತನ್ನು ಸೇರಿಸುತ್ತಿರಲಿಲ್ಲ. ಇದೊಂದು ನಗೆಗೇಡು. ಈಗ ನಾಲ್ಕು ದಿನಗಳ ಕೆಳಗೆ, ರಾಮರಾಯರ ಮನೆಯಲ್ಲಿ ಒಂದು ಸೌದೆಯ ಹೊರೆಯನ್ನು ಕೊಂಡರು. ಅವರ ಮಗ ದುಡ್ಡು ಕೊಡುವುದಕ್ಕೆ ಬಂದು, ''ನಿನಗೆ ಎಷ್ಟು ಕೊಡಬೇಕೆ?'' ಎಂದು ಸೌದೆಯವಳನ್ನು ಕೇಳಿದನು. ಅದಕ್ಕೆ ಅವಳು ''ಸ್ವಾಮಿ, ನಾಲ್ಕು ದುಡ್ಡು ಕೊಡಬೇಕು,'' ಎಂದಳು. ಅದಕ್ಕೆ ರಾಮರಾಯರ ಮಗ, ''ಈಗ ಛೇಂಜು ಇಲ್ಲ. ಹೋಗು, ನಾಳೆ ಬಾ,'' ಎಂದು ಒಳಗೆ ಹೊರಟು ಹೋದನು. ಅವಳಿಗೆ ಪಾಪ ಅರ್ಥವೇ ಆಗಲಿಲ್ಲ. ಅವಳು ಗೊಣಗುಟ್ಟುತ್ತಾ ಹೊರಟುಹೋದಳು. ಆಗ ನಾನೂ ಅಲ್ಲೇ ನಿಂತಿದ್ದೆ. ನನಗೂ ತಿಳಿಯಲಿಲ್ಲ. ಆಮೇಲೆ ರಂಗನ ಮನೆಗೆ ಬಂದು ರಂಗನನ್ನು ಕೇಳಿದೆ. ಅವನು 'ಛೇಂಜ್' ಎಂದರೆ ಚಿಲ್ಲರೆ ಎಂದು ಹೇಳಿಕೊಟ್ಟ.

ಈ ರೀತಿಯಾದ ಅಮೂಲ್ಯವಾದ ಇಂಗ್ಲೀಷು ಭಾಷೆ ಆಗ ನಮ್ಮೂರಿನಲ್ಲಿ ಪ್ರಚುರವಾಗಿರಲಿಲ್ಲ. ಆದುದರಿಂದ ರಂಗ ಬೆಂಗಳೂರಿನಿಂದ ಬಂದಾಗ ಊರಿನವರೆಲ್ಲ, ''ಕರಣಿಕರ ಮಗ ಬಂದನಂತೆ !'' ''ಅಯ್ಯೋ ! ಬೆಂಗಳೂರಿಗೆ ಓದುವುದಕ್ಕೆ ಹೋಗಿದ್ದನಲ್ಲಾ, ಆ ಹುಡುಗ ಬಂದನಂತೆ !'' ''ಲೋ ! ರಂಗ ಬಂದನಂತೆ ! ನೋಡೋಣ. ಬಾರೋ !'' ಎಂದು ಅವರ ಮನೆಯ ಬಾಗಿಲಿಗೆ ಓಡಿ ಹೋದರು. ಜನ ಮರುಳೋ? ಜಾತ್ರೆ ಮರುಳೊ? ನಾನೂ ಅವರ ಪಡಸಾಲೆಗೆ ಹೋಗಿ ನಿಂತುಕೊಂಡೆ. ಜನರ ಗುಂಪನ್ನು ನೋಡಿ ''ಇವರೆಲ್ಲರೂ ಏಕೆ ಬಂದಿರುವರೋ? ಇಲ್ಲೇನು ಕೋತಿ ಕುಣಿಯುತ್ತೆಯೇ?'' ಎಂದೆ. ಅಲ್ಲಿದ್ದ ಒಬ್ಬ ಹುಡುಗ, ಸ್ವಲ್ಪವೂ ಬುದ್ಧಿಯಿಲ್ಲದವನು, ''ನೀನೇಕೆ ಬಂದೆ?'' ಎಂದು ಅಷ್ಟು ಜನರೆದುರಿಗೂ ನನ್ನನ್ನು ಕೇಳಿಬಿಟ್ಟ. ಶುದ್ಧ ಹುಡುಗ; ಮಾನ ಮರ್ಯಾದೆಯನ್ನರಿಯದ ಪೋರ. ಪೂರ್ವ ಕಾಲದ ನೀತಿ ನಯಗಳು ಮರೆಯಾದವೆಂದು ನಾನು ಸುಮ್ಮನಾದೆ.

ಇಷ್ಟು ಜನರನ್ನೂ ನೋಡಿದ ರಂಗ ನಗುತ್ತಾ ಹೊರಗೆ ಬಂದ. ನಾವೆಲ್ಲರೂ ಒಳಗೆ ಹೋಗಿದ್ದರೆ ಕಲಿಕತ್ತೆಯ ಕತ್ತಲೆಯ ಕೋಣೆಯೆಂದು ಹೇಳುತಾರಲ್ಲಾ, ಅದರಂತೆ ಆಗುತ್ತಲಿತ್ತು. ದೇವರ ಕೃಪೆಯಿಂದ ಅದು ತಪ್ಪಿತು. ರಂಗ ಹೊರಗೆ ಬಂದರೆ, ಎಲ್ಲರಿಗೂ ಆಶ್ಚರ್ಯ. ಆರು ತಿಂಗಳ ಹಿಂದೆ ನಮ್ಮೂರಿಂದ ಹೋದಾಗ ಹೇಗೆ ಇದ್ದನೋ ಹಾಗೆಯೇ ಇದ್ದನು. ಒಬ್ಬ ಮುದುಕಮ್ಮನವರು ಅವನ ಹತ್ತಿರ ನಿಂತಿದ್ದರು. ಅವರು ಅವನ ಎದೆಯ ಮೇಲೆ ಕೈಯಾಡಿಸಿ, ದೃಷ್ಟಿಸಿ ನೋಡಿ, ''ಜನಿವಾರ ಇನ್ನೂ ಇದೆ ಜಾತಿ ಕೆಡಿಸಿಲ್ಲ,'' ಎಂದು ಹೊರಟುಹೋದರು. ರಂಗ ನಕ್ಕ.

ರಂಗನಿಗೆ ಮೊದಲಿನ ಹಾಗೆಯೇ ಕೈಯಿ, ಕಾಲು, ಕಣ್ಣು, ಮೂಗುಗಳೆಲ್ಲ ಇದ್ದುದರಿಂದ, ಹುಡುಗನ ಬಾಯಲ್ಲಿ ಕಲ್ಲು ಸಕ್ಕರೆ ಕರಗುವಂತೆ ಆ ದೊಂಬಿಯ ಗುಂಪು ಕರಗಿಹೋಯಿತು. ನಾನು ನಿಂತುಕೊಂಡೇ ಇದ್ದೆ. ಎಲ್ಲರೂ ಹೋದ ಮೇಲೆ, 'ಏನಯ್ಯಾ; ರಂಗಪ್ಪ : ಸೌಖ್ಯವಾಗಿದ್ದೀಯಾ?'' ಎಂದು ಕೇಳಿದೆ. ಆಗ ರಂಗ ನನ್ನನ್ನು ನೋಡಿದ. ನೋಡಿ ಹತ್ತಿರಕ್ಕೆ ಬಂದು ನಮಸ್ಕಾರ ಮಾಡಿ, ''ತಮ್ಮ ಆಶೀರ್ವಾದದಿಂದ ಇಷ್ಟರಮಟ್ಟಿಗೆ ಇದೇನೆ,'' ಎಂದ.

ರಂಗನಲ್ಲಿ ಇದ್ದುದು ಇದೊಂದು ದೊಡ್ಡ ಗುಣ : ನೋಡಿ. ಯಾರೊಡನೆ ಮಾತನಾಡಿದರ ಪ್ರಯೋಜನವುಂಟೆಂದು ಅವನಿಗೆ ತಿಳಿದಿದ್ದಿತು. ಜನರ ಬೆಲೆಯನ್ನು ಅವನು ಚೆನ್ನಾಗಿ ಬಲ್ಲನು. ನಮಸ್ಕಾರ ಮಾಡಿದ್ದೋ! ಈಗಿನ ಹುಡುಗರಂತೆ, ತಲೆಯನ್ನು ಮೇಲಕ್ಕೆ ಎತ್ತಿ ಸೂರ್ಯನನ್ನು ನೋಡುತ್ತ, ಸೊಂಟದ ಹತ್ತಿರ ಕೀಲೇ ಇಲ್ಲದಂತೆ ಕೋಲಿನಂತೆ ನಿಂತುಕೊಂಡು, ಕೈಯನ್ನೋ ಬೆತ್ತವನ್ನೋ ಅಲ್ಲಾಡಿಸುವಂತಿಲ್ಲ : ಸುಮ್ಮನೆ ಕಣ್ಣೋಡಿಸುವ ನಮಸ್ಕಾರವೂ ಅಲ್ಲ : ನೆಲಕ್ಕೆ ಬಗ್ಗಿ

ಕಾಲುಗಳನ್ನು ಮುಟ್ಟಿ ಮಾಡಿದ. ನಾನು ''ಶೀಘ್ರಮೇವ ವಿವಾಹಮಸ್ತು'' ಎಂದು ಆಶೀರ್ವದಿಸಿದೆ. ಒಂದೆರಡು ಮಾತನ್ನಾಡಿ ಮನೆಗೆ ಹೊರಟೆ.

ಮಧ್ಯಾಹ್ನ ನಾನು ಊಟಮಾಡಿ ಮಲಗಿಕೊಂಡಿದ್ದಾಗ ರಂಗ ಎರಡು ಕಿತ್ತಲೆಯ ಹಣ್ಣುಗಳನ್ನು ಹಿಡಿದುಕೊಂಡು ನಮ್ಮ ಮನೆಗೆ ಬಂದ. ಬಹು ಉಪಕಾರಿ; ಧಾರಾಳ ಬುದ್ಧಿಯವನು. ಇವನಿಗೆ ಮದುವೆ ಮಾಡಿದರೆ ಒಳ್ಳೆಯ ಸಂಸಾರಿಯಾಗಿ ನಾಲ್ಕಾರು ಜನರಿಗೆ ಉಪಕಾರಿಯಾಗುವನೆಂದು ನಾನು ಎಣಿಸಿಕೊಂಡೆನು.

ಸ್ವಲ್ಪ ಹೊತ್ತು ಆ ಮಾತು ಈ ಮಾತು ಆಡಿದ ಅನಂತರ ನಾನು ''ರಂಗಪ್ಪ, ನೀನು ಯಾವಾಗ ಮದುವೆ ಮಾಡಿಕೊಳ್ಳುವೆಯೋ?'' ಎಂದು ಕೇಳಿದೆ.

ರಂಗ : ನಾನು ಈಗ ಮದುವೆ ಮಾಡಿಕೊಳ್ಳುವುದಿಲ್ಲ.

''ಏತಕ್ಕಯ್ಯ?''

ರಂಗ : ನನಗೆ ಸರಿಯಾದ ಹುಡುಗಿ ಸಿಕ್ಕಬೇಕು. ನಮ್ಮ ಸಾಹೇಬರು ಒಬ್ಬರು ಇದ್ದಾರೆ. ಅವರು ಮದುವೆ ಮಾಡಿಕೊಂಡುದು ಆರು ತಿಂಗಳ ಹಿಂದೆ. ಅವರಿಗೆ ಸುಮಾರು ಮೂವತ್ತು ವರ್ಷ; ಅವರ ಹೆಂಡತಿಗೆ ಇಪ್ಪತ್ತೈದು ವರ್ಷವಂತೆ. ಅವರು ಪ್ರೇಮವಾಗಿ ಮಾತನಾಡಿಕೊಳ್ಳಬಲ್ಲರು. ನಾನು ಒಬ್ಬ ಸಣ್ಣ ಹುಡುಗಿಯನ್ನು ಮದುವೆ ಮಾಡಿಕೊಂಡೆನ್ನಿ. ಏನಾದರೂ ಪ್ರೇಮದ ಮಾತನ್ನಾಡಿದರೆ, ಅವಳು ಬೈದನೆಂದೇ ತಿಳಿದುಕೊಳ್ಳಬಹುದು. ಬೆಂಗಳೂರಿನ ಒಂದು ನಾಟಕ ಸಂಘದವರು ''ಶಾಕುಂತಲ'' ನಾಟಕವನ್ನಾಡಿದರು. ಶಕುಂತಲೆ ಈಗ ಮದುವೆಯಾಗುವ ಹುಡುಗಿಯರ ಹಾಗೆ ಚಿಕ್ಕವಳಾಗಿ ಇದ್ದರೆ, ದುಷ್ಯಂತನು ಪ್ರೀತಿಸುವುದೆಲ್ಲಿ? ಕಾಳಿದಾಸನ ನಾಟಕದ ಅಭಿರುಚಿಯೆಲ್ಲಿ? ಮದುವೆಯಾದರೆ ವಯಸ್ಸಾದ ಹುಡುಗಿಯನ್ನೇ ಮಾಡಿಕೊಳ್ಳಬೇಕು; ಇಲ್ಲದಿದ್ದರೆ ಸುಮ್ಮನೆ ಇರಬೇಕು. ಅದಕ್ಕಾಗಿಯೇ ನಾನು ಬೇಗ ಮಾಡಿಕೊಳ್ಳುವುದಿಲ್ಲವೆಂದುದು.

''ಇನ್ನೇನಾದರೂ ಕಾರಣವುಂಟೊ?''

ರಂಗ : ನಾವೇ ಮೆಚ್ಚಿ ಮದುವೆ ಮಾಡಿಕೊಳ್ಳುವಂತಿರಬೇಕು. ಈಗ ನಾವು ಹಾಗೆ ಮಾಡಕೂಡದು. ಅಥವಾ ಮಾಡಿದೆವು. ಪಾಪ : ಒಂದು ಕೆನ್ನೆ ಹಾಲು, ಒಂದು ಕೆನ್ನೆ ನೀರು ಆಗಿ, ಬೆರಳು ಕಡಿಯಲು ಸಹಾ ಬಾರದ ಹುಡುಗಿಯರನ್ನು ತಂದು ಇದುರಿಗೆ ನಿಲ್ಲಿಸಿದರೆ, ಮೆಚ್ಚುವುದು ಹೇಗೆ?

''ಒಂದು ಬೇವಿನಕಾಯಿ, ಒಂದು ಹಾಗಲಕಾಯಿ, ಅಲ್ಲವೆ?''

ರಂಗ : (ನಗುತ್ತ) ಎಕ್ಸಾಕ್ಟ್ಲೀ ! ಊಂ ಹೌದು.

ಜಾಗ್ರತೆಯಾಗಿ ಮದುವೆ ಮಾಡಿದರೆ ಒಳ್ಳೆಯ ಸಂಸಾರಿಯಾಗುವನೆಂದು ನಾನು ಯೋಚಿಸಿದರೆ. ಈ ಹುಡುಗ ನಿತ್ಯ ಬ್ರಹ್ಮಚಾರಿಯಾಗಬೇಕೆಂದಿರುವನಲ್ಲಾ, ಎಂದು ನಾನು ಬಹು ವ್ಯಾಕುಲಚಿತ್ತನಾದೆನು. ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ರಂಗನನ್ನು ಕಳುಹಿಸಿಕೊಟ್ಟು, 'ಈ ಹುಡಗನಿಗೆ ಮದುವೆ ಮಾಡಿಸಲೇಬೇಕು'' ಎಂದು ಶಪಥ ಮಾಡಿಕೊಂಡೆನು.

ನಮ್ಮ ರಾಮರಾಯರ ಮನೆಗೆ ಅವರ ಅಕ್ಕನ ಮಗಳು ಬಂದಿದ್ದಳು. ಹುಡುಗಿಗೆ ಹನ್ನೊಂದು ವರ್ಷ. ಚೆಲುವ ಹುಡುಗಿ. ದೊಡ್ಡ ಪಟ್ಟಣದಲ್ಲಿದ್ದವಳಾದುದರಿಂದ, ಸ್ವಲ್ಪ ವೀಣೆ ಹಾರ್ಮೋನಿಯಂ ಬಾರಿಸಲು ಬರುತ್ತಿದ್ದಿತು. ಸ್ವರವೋ ಅತಿ ಮಧುರ ತಾಯಿತಂದೆಗಳಿಬ್ಬರೂ ಸತ್ತು ಹೋಗಿದ್ದುದರಿಂದ, ಮಾವ ತನ್ನ ಮನೆಗೆ ಕರೆತಂದಿದ್ದರು. ಅವಳಿಗೆ ತಕ್ಕ ವರ ರಂಗ. ರಂಗನಿಗೆ ತಕ್ಕ ವಧು ಅವಳು.

ನಾನು ರಾಮರಾಯರ ಮನೆಗೆ ಬರುತ್ತ ಹೋಗುತ್ತ ಇದ್ದುದರಿಂದ ನನ್ನನ್ನು ಕಂಡರೆ, ಆ ಹುಡುಗಿಗೆ ಸಲಿಗೆ ಹೆಚ್ಚು. ಆ ಹುಡುಗಿಯ ಹೆಸರನ್ನು ಹೇಳುವುದನ್ನೇ ಮರೆತೆ. ಅದರ ಹೆಸರು - ರತ್ನ ! ನಾನು ಮಾರನೆಯ ದಿನ ಪ್ರಾತಃಕಾಲ ರಾಮರಾಯರ ಮನೆಗೆ ಹೋಗಿ ಅವರ ಹೆಂಡತಿಯನ್ನು ಕಂಡು, ''ಮಜ್ಜಿಗೆ ಕಳುಹಿಸುತ್ತೇನೆ. ರತ್ನಮ್ಮನನ್ನು ಕಳುಹಿಸಿಕೊಡಿ,'' ಎಂದು ಹೇಳಿ ಬಂದೆ.

ರತ್ನಮ್ಮ ಬಂದಳು. ಶುಕ್ರವಾರವಾದುದರಿಂದ ಒಳ್ಳೆಯ ಸೀರೆ ಉಟ್ಟು ಕೊಂಡಿದ್ದಳು. ಅವಳನ್ನು ನನ್ನ ಕೊಠಡಿಯಲ್ಲಿ ಕುಳ್ಳಿರಿಸಿ, ''ಅಮ್ಮಾ ! ಒಂದು ಸೊಗಸಾದ ಹಾಡನ್ನು ಹೇಳಮ್ಮ !'' ಎಂದು ಬೇಡಿಕೊಂಡೆನು. ಆಗ ರಂಗನನ್ನು ಕರೆಯಕಳುಹಿಸಿದೆನು. ರತ್ನಮ್ಮ ಸುಮಧುರ ಸ್ವರದಿಂದ ಕೃಷ್ಣಾಮೂರ್ತೀ ಕಣ್ಣಾ ಮುಂದೆ'' ಎಂಬ ಹಾಡನ್ನು ಹಾಡುತ್ತಿದ್ದಾಗ ರಂಗ ಬಂದ. ಬಾಗಿಲವರೆಗೆ ಬಂದವನು. ಹೊಸ್ತಿಲ ಹತ್ತಿರ ಬಂದರೆ ಎಲ್ಲಿ ಹಾಡು ನಿಂತು ಹೋಗುವುದೋ ಎಂಬ ಭಯ, ಹಾಡುವವರನ್ನು ನೋಡಬೇಕೆಂಬ ಕುತೂಹಲ, ಮೆಲ್ಲಗೆ ಬಾಗಿಲಿನಿಂದ ಇಣಿಕಿ ನೋಡಿದ, ಬೆಳಕು ಮರೆಯಾದುದರಿಂದ ರತ್ನಮ್ಮ ಬಾಗಿಲಕಡೆ ದಿಟ್ಟಿಸಿದಳು. ಅಪರಿಚಿತರು ಬಂದುದನ್ನು ಕಂಡು ಹಾಡುವುದನ್ನು ನಿಲ್ಲಿಸಿಬಿಟ್ಟಳು.

ಕಸಿ ಮಾವಿನ ಹಣ್ಣನ್ನು ತಿನ್ನುವಾಗ 'ದುಡ್ಡು ಕೊಟ್ಟ ಹಣ್ಣಿನ ಯಾವ ಭಾಗವಾದರೂ ವ್ಯರ್ಥವಾಗಿ ಹೋಗುವುದಲ್ಲಾ; ಎಂದು ಅದರ ತೊಗಟೆಯನ್ನು ಮೊದಲು ತಿಂದು ಆಮೇಲೆ ತಿರುಳಿನಲ್ಲಿ ಸ್ವಲ್ಪ ರುಚಿ ನೋಡಿ, ಉಳಿದುದನ್ನು ತಿನ್ನಲು ಪ್ರಯತ್ನಿಸಿದಾಗ ಅದು ಕೈಜಾರಿ ಮರಳಿನಲ್ಲಿ ಬಿದ್ದು ಹೋದರೆ. ನಿಮಗೆ ಯಾವ ವಿಧವಾದ ಖೇದವುಂಟಾಗುವುದೋ. ಅದೇ ವಿಧವಾದ ಖೇದ ರಂಗನ ಮುಖದಲ್ಲಿ ತೋರಿಬಂದಿತು. ಅವನು, ''ಏನೋ ಬರಹೇಳಿದಿರಂತಲ್ಲ'' ಎಂದು ಒಳಗೆ ಬಂದು ಕುರ್ಚಿಯ ಮೇಲೆ ಕುಳಿತುಕೊಂಡನು.

ರತ್ನಮ್ಮ ತಲೆ ಬಗ್ಗಿಸಿಕೊಂಡು ದೂರದಲ್ಲಿ ನಿಂತುಕೊಂಡಳು. ರಂಗ ಪುನಃಪುನಃ ಅವಳ ಕಡೆಗೆ ನೋಡಿದ. ಒಮ್ಮೆ ಅವಳನ್ನ ಹಾಗೆ ನೋಡುತ್ತಿದ್ದಾಗ ನನ್ನ ದೃಷ್ಟಿ ಅವನ ದೃಷ್ಟಿಯೊಡನೆ ಸೇರಿತು. ಆಗ ಅವನಿಗೆ ಬಹಳ ಅವಮಾನವಾಗಿರಬಹುದು. ಬಹಳ ಹೊತ್ತು ಯಾರೂ ಮಾತನಾಡಲಿಲ್ಲ. ಅನಂತರ ರಂಗನೇ ಮೊದಲು, ''ನಾನು ಬಂದುದರಿಂದ ಹಾಡು ನಿಂತು ಹೋಯಿತು. ನಾನು ಹೊರಡುತ್ತೇನೆ,'' ಎಂದನು. ಬಾಯಲ್ಲಿ ಹೇಳಿದುದೆಷ್ಟೋ ಅಷ್ಟೆ ! ಹೋಗುವೆನೆಂದ ದೊಡ್ಡ ಮನುಷ್ಯ ಕುರ್ಚಿಯನ್ನು ಬಿಟ್ಟು ಏಳಲೇ ಇಲ್ಲ. ಕಲಿಯುಗದಲ್ಲಿ ತ್ರಿಕರಣಶುದ್ಧಿಯೆಲ್ಲಿಯದು?

ರತ್ನಮ್ಮ ನಾಚಿಕೊಂಡು ಮನೆಯೊಳಕ್ಕೆ ಓಡಿದಳು.

ಸ್ವಲ್ಪ ಹೊತ್ತು ಮೂಕನಂತೆ ಕುಳಿತಿದ್ದು ರಂಗ, 'ಆ ಹುಡುಗಿ ಯಾರು ಸ್ವಾಮಿ?'' ಎಂದು ಕೇಳಿದ.

ಗುಡಿಯೊಳಗೆ ಅವಿತುಕೊಂಡಿದ್ದ ಹೋತವನ್ನು ಸಿಂಹ ಹೊರಗಿನಿಂದ ''ಯಾರು ಅದು ಒಳಗೆ'' ಎಂದು ಕೇಳಿದುದಕ್ಕೆ, ಮೇಕೆ ''ಯಾರಾದರೇನು ನಾನೊಂದು ಬಡಬಂತು, ಒಂಭತ್ತು ಗಂಡು ಸಿಂಹಗಳನ್ನು ತಿಂದು ಇದ್ದೇನೆ. ಇನ್ನೊಂದನ್ನು ತಿನ್ನಬೇಕೆಂಬ ವ್ರತವಿದೆ. ನೀನು ಗಂಡೋ? ಹೆಣ್ಣೋ'' ಎಂದು ಕೇಳಿತಂತೆ ! ಅದಕ್ಕೆ ಸಿಂಹ ಹೆದರಿ ಓಡಿಹೋಯಿತಂತೆ ! ಆ ಹೋತದಂತೆ ನಾನು ''ಯಾರದಾರೇನು ನನಗೂ ನಿನಗೂ? ನನಗೆ ಮದುವೆಯಾಗಿದೆ; ನೀನು ಮಾಡಿಕೊಳ್ಳುವುದಿಲ್ಲ;'' ಎಂದೆ.

ಅದಕ್ಕೆ ರಂಗ, ''ಆ ಹುಡುಗಿಗೆ ಇನ್ನೂ ಮದುವೆಯಿಲ್ಲವೆ?'' ಎಂದು ಬಹಳ ಆಸೆಯಿಂದ ಕೇಳಿದನು. ಆಸೆಯಿದೆಯೆಂಬುದನ್ನು ತೋರ್ಪಡಿಸಲಿಲ್ಲ! ಆದರೆ ಅದು ನನಗೆ ತಿಳಿಯಿತು.

''ಆಗಿ ಒಂದು ವರ್ಷವಾಯಿತು.''

ರಂಗನ ಮುಖ ಬೆಂಕಿಯಲ್ಲಿ ಬೆಂದ ಬದನೆಯ ಕಾಯ ಹಾಗೆ ಕಂದು ಹೋಯಿತು.

ಸ್ವಲ್ಪ ಹೊತ್ತಿನ ಮೇಲೆ ರಂಗ, ''ನನಗೆ ಕೆಲಸವಿದೆ. ಮನೆಗೆ ಹೋಗುತ್ತೇನೆ,'' ಎಂದು ಹೊರಟುಹೋದ.

ನಾನು ಮಾರನೆಯ ಬೆಳಿಗ್ಗೆ ನಮ್ಮ ಶಾಸ್ತ್ರೀಯ ಬಳಿಗೆ ಹೋಗಿ ''ಜೋಸ್ಯ ಕೇಳುವುದಕ್ಕೆ ಬೇಕಾದುದನ್ನೆಲ್ಲ ಸರಿಯಾಗಿ ಇಡು. ಮಧ್ಯಾಹ್ನ ಬರುತ್ತೇನೆ'' ಎಂದು ಇನ್ನೂ ಹೇಳಬೇಕಾದುದನ್ನೆಲ್ಲ ಹೇಳಿಕೊಟ್ಟು ಮನೆಗೆ ಬಂದೆನು.

ಮಧ್ಯಾಹ್ನ ರಂಗನನ್ನು ಕಂಡಾಗ ಅವನು ಇನ್ನೂ ಹಾಗೆಯೇ ಇದ್ದನು. ನಾನೇ ಮೊದಲು ''ಏನಪ್ಪಾ ! ಬಹಳ ಆಲೋಚನೆ ಮಾಡುತ್ತಿದೀಯೆ? ಎಂದು ಕೇಳಿದೆ.

''ಆಲೋಚನೆಯೇನು? ಒಂದೂ ಇಲ್ಲ.''

''ತಲೆ ನೋವೆ? ಬಾ ! ವೈದ್ಯರ ಬಳಿಗೆ ಹೋಗೋಣ''

''ತಲೆ ನೋವಿಲ್ಲ. ನಾನು ಇರುವುದೇ ಹೀಗೆ''

''ನನಗೆ ಹುಡುಗಿಯನ್ನು ಗೊತ್ತು ಮಾಡುವ ಕಾಲದಲ್ಲಿ, ಎಲ್ಲವೂ ನಿಷ್ಕರ್ಷೆ ಯಾಗುವುದಕ್ಕೆ ಮೊದಲು, ನಾನು ಹೀಗೆಯೇ ಇದ್ದೆ. ನಿನಗೆ ಆ ಕಾರಣವೇನೂ ಇರಲಾರದಷ್ಟೆ?''

ರಂಗ ನನ್ನನ್ನೇ ದೃಷ್ಟಿಸಿ ನೋಡಿದ.

''ಶಾಸ್ತ್ರಿಗಳ ಬಳಿಗೆ ಹೋಗೋಣ ಬಾ. ಗುರುಬಲ ಶನಿಬಲ ಸರಿಯಾಗಿದೆಯೋ ಇಲ್ಲವೋ ವಿಚಾರಿಸೋಣ.''

ರಂಗ ಯಾವ ಆಲೋಚನೆಯನ್ನೂ ಮಾಡದೆ,

ಸುಮ್ಮನೆ ಮೇಲಕ್ಕೆ ಎದ್ದನು. ಶಾಸ್ತ್ರಿಯ ಬಳಿಗೆ ಹೋದೆವು. ಅವನು ''ಏನಯ್ಯಾ? ಶ್ಯಾಮ ನಿನ್ನನ್ನು ನೋಡಿ ಬಹಳ ದಿನ ಆಯಿತು!'' ಎಂದನು.

ಶ್ಯಾಮ ಈ ಕತೆಯನ್ನು ಹೇಳುತ್ತಿರುವ ತಮ್ಮ ಸೇವಕ.

ನನಗೆ ಕೋಪ ಬಂದಿತು. ನಾನು, ''ಇದೇನಯ್ಯಾ, ಈ ಹೊತ್ತು...'' ಎಂದು ಹೇಳುವಷ್ಟರಲ್ಲಿಯೇ ಶಾಸ್ತ್ರಿ, ''ಬಿಡುವಾಯಿತು, ಇದುವರೆಗೆ ಏನಾದರೂ ಕೆಲಸದಲ್ಲಿದ್ದೆಯೇನೋ?'' ಎಂದು ಹೇಳಿ ಪೂರ್ತಿ ಮಾಡಿದನು. ಇಲ್ಲದಿದ್ದರೆ ನಾನು ಹುಚ್ಚನ ಹಾಗೆ. ''ಈ ಹೊತ್ತು ಬೆಳಗ್ಗೆ ಬಂದಿದ್ದೆನಲ್ಲಾ?'' ಎಂದು ಹೇಳಿ, ಬಿಸಿನಲ್ಲಿಟ್ಟ ಹರಳಿನ ಕಾಯಂತೆ ನಮ್ಮ ತಂತ್ರವೆಲ್ಲಾ ಸಿಡಿದು ಹೋಗುವ ಹಾಗೆ ಮಾಡುತ್ತಿದ್ದೆ. ಆಮೇಲೆ ಬಹಳ ಜಾಗರೂಕನಾಗಿದ್ದೆ.

''ನಮ್ಮ ಕರಣಿಕರ ಮಕ್ಕಳು ಯಾವಾಗ ಬಂದರು? ಏನಾಗಬೇಕು? ಅವರು ನಮ್ಮ ಮನೆಗೆ ಬರುವುದೇ ಅಪರೂಪ !'' ಇತ್ಯಾದಿ ಮರ್ಯಾದೆಗಳೆಲ್ಲ ನಡೆದುವು.

''ನಿನ್ನ ಗಂಟನ್ನು ಬಿಚ್ಚಯ್ಯ : ನಮ್ಮ ರಂಗಪ್ಪನಿಗೇನೋ ಬಹಳ ಆಲೋಚನೆ ಬಂದಿದೆ. ಅದರ ಕಾರಣವೇನು ಹೇಳಬಲ್ಲೆಯ? ನಿಮ್ಮ ಜ್ಯೋತಿಷ್ಯ ಶಾಸ್ತ್ರದ ಶಕ್ತಿಯನ್ನು ಪರೀಕ್ಷಿಸೋಣ?'' ಎಂದು ನಾನು ಬಹಳ ದರ್ಪದಿಂದ ಹೇಳಲು, ಶಾಸ್ತ್ರಿ ಎರಡು ಕಾಗದ, ಕೆಲವು ಕವಡೆ, ಒಂದು ಓಲೆ ಪುಸ್ತಕ, ಇವನ್ನೆಲ್ಲ ತೆಗೆದು, ''ಅನಾದಿಯಾದ ಶಾಸ್ತ್ರವಯ್ಯಾ ಇದು, ಇದಕ್ಕೆ ಒಂದು ಕತೆಯೂ ಇದೆ ಎಂದು ಒಂದು ಕತೆಯನ್ನು ಹೇಳಿದ. ಆ ಕತೆಯನ್ನು ನಾನು ಈಗ ಇಲ್ಲಿ ಹೇಳುವುದಿಲ್ಲ. ಕಥೆಯಲ್ಲಿ ಉಪಕತೆಯನ್ನು ಸೇರಿಸಲು ಇದೇನು ಹರಿಕಥೆಯೇ? ಅಲ್ಲದೆ ನಿಮಗೂ ಬೇಸರವಾಗಬಹುದು. ಇನ್ನೂ ಯಾವಾಗಲಾದರೂ ವಿರಾಮ ದೊರೆತರೆ ಹೇಳುವೆನು.

ಶಾಸ್ತ್ರಿ ತುಂಟಿಗಳನ್ನು ಪಿಟಿಪಿಟಿ ಆಡಿಸುತ್ತ ಬೆರಳುಗಳನ್ನು ಎಣಿಸುತ್ತಿದ್ದು ಸ್ವಲ್ಪ ಹೊತ್ತಾದ ಮೇಲೆ? ''ನಿಮ್ಮ ನಕ್ಷತ್ರ ಯಾವುದು ?'' ಎಂದು ಕೇಳಿದನು. ರಂಗ ತಿಳಿಯದೆಂದನು. ಶಾಸ್ತ್ರಿ ಚಿಂತೆಯಿಲ್ಲ ಎಂದು ತಲೆಯಲ್ಲಾಡಿಸಿ, ಲೆಕ್ಕಮಾಡಿ, ಕೊನೆಗೆ, 'ಕನ್ಯಾ ವಿಷಯ,'' ಎಂದು ಬಹು ಗಾಂಭೀರ್ಯದಿಂದ ಹೇಳಿದನು. ಅವನ ಆಟಗಳನ್ನು ನೋಡುತ್ತಿದ್ದ ನನಗೆ ತಡೆಯಲಾರದ ನಗು. ಆದರೂ ಆಗ ನಗದೆ ಇದ್ದ ನಾನು ಮಾತನ್ನು ಕೇಳಿದ ಕೂಡಲೆ ಫಕ್ಕನೆ ನಕ್ಕು ''ಏನಯ್ಯ ರಂಗ? ನಾನು ಹೇಳಿದ ಹಾಗೆಯೇ ಆಯಿತಲ್ಲ?'' ಎಂದೆನು.

''ಕನ್ಯೆ ಯಾರು?'' ಕೇಳಿದವನು ನಾನು; ತಮ್ಮ ದಾಸ.

ಸ್ವಲ್ಪ ಹೊತ್ತು ಆಲೋಚನೆಮಾಡಿ ''ಸಮುದ್ರದಲ್ಲಿ ಸಿಕ್ಕುವ ಪದಾರ್ಥದ ಹೆಸರಿನ ಹುಡುಗಿಯಾಗಿರಬೇಕು''

''ಕಮಲ ಎಂತಲೆ?''

''ಇರಬಹುದು''

''ಪಾಚಿ ಇರಬಹುದು.''

''ಕಮಲವನ್ನು ಬಿಟ್ಟರೆ, ಪಾಚಿಯೇನೆ ಮುತ್ತು ರತ್ನ...''

''ರತ್ನವೆ? ರಾಮರಾಯರ ಮನೆಗೆ ಬಂದಿರುವ ಹುಡುಗಿಯ ಹೆಸರು ರತ್ನ. ಹೋಗಲಿ; ಕನ್ಯಾಲಾಭವಾಗಬಹುದೋ?''

ಪುನಃ ಸ್ವಲ್ಪ ಆಲೋಚಿಸಿ : ''ಆಗುವುದು''

ರಂಗನ ಮುಖ ಆಶ್ಚರ್ಯದಿಂದ ತುಂಬಿತ್ತು, ಅದರಲ್ಲಿ ಸ್ವಲ್ಪ ಸಂತೋಷವೂ ಇತ್ತು. ನಾನು ಅದನ್ನು ನೋಡಿ, ''ಆ ಹುಡಿಗಿಗೆ ಮದುವೆಯಾಗಿದೆಯಲ್ಲ?'' ಎಂದೆನು. ನನ್ನ ಮಾತು ಮುಗಿಯಲೇ ಇಲ್ಲ. ಹಾಗೆ ಒಂದು ಸಾರಿ ತಿರುಗಿ ನೋಡಿದೆನು. ರಂಗನ ಮುಖ ಅಷ್ಟರಲ್ಲೆ ಮಂಕಾಗಿ ಹೋಗಿತ್ತು.

''ಅದನ್ನೆಲ್ಲಾ ಕಾಣೆ. ಇನ್ನಾರಾದರೂ ಇರಬಹುದು. ಶಾಸ್ತ್ರ ಹೇಳಿದುದನ್ನು ನಾನು ಹೇಳಿದೆ.''

ಅಲ್ಲಿಂದ ಹೊರಟೆವು. ಬರುತ್ತ ರಾಮರಾಯರ ಮನೆಯ ಬಾಗಿನಲ್ಲೆ ರತ್ನ ನಿಂತಿದ್ದುದನ್ನು ನೋಡಿ ನಾನು ಮಾತ್ರ ಒಳಗೆ ಹೋಗಿ ಪುನಃ ಹೊರಗೆ ಬಂದೆನು. ಬಂದಕೂಡಲೆ, ರಂಗನನ್ನು ಕುರಿತು ಏನು ಆಶ್ಚರ್ಯವಪ್ಪ? ಈ ಹುಡುಗಿಗೆ ಮದುವೆಯಾಗಿಲ್ಲವಂತೆ. ನನಗೆ ಯಾರೊ ಆ ದಿನ ಆಗಿದೆಯೆಂದು ಹೇಳಿದರು. ಈಗ ಶಾಸ್ತ್ರ ಹೇಳಿದುದೆಲ್ಲ ನಿಜವಾಗಿಯೇ ಪರಿಣಮಿಸಿತು. ರಂಗಪ್ಪ, ನೀನೇನೋ ಆ ಹುಡುಗಿಗೋಸ್ಕರ ಆಲೋಚನೆ ಮಾಡುತ್ತಿದ್ದೆಯೆಂಬುದನ್ನು ನಾನು ನಂಬಲಾರೆ. ಏನಯ್ಯ, ಮಧ್ವಾಚಾರ್ಯರಾಣೆ ಹೇಳು; ಮರೆಮಾಚಬೇಡ. ಅವರು ಹೇಳಿದ್ದೆಲ್ಲ ನಿಜವೊ, ಅಲ್ಲವೊ?'' ಎಂದು ಕೇಳಿದೆನು.

ಇನ್ನಾರಾದರೂ ಆಗಿದ್ದರೆ, ಹೇಳುತ್ತಿದ್ದರೋ ಇಲ್ಲವೋ ನಾನರಿಯೆ ರಂಗ ''ಶಾಸ್ತ್ರದಲ್ಲಿ ನಮಗೆ ತಿಳಿದಿರುವುದಕ್ಕಿಂತ ಹೆಚ್ಚು ನಿಜವಿದೆ. ಅವರು ಹೇಳಿದ್ದೆಲ್ಲ ನಿಜ!'' ಎಂದು ಒಪ್ಪಿಕೊಂಡನು.

ಆ ದಿನ ಸಾಯಂಕಾಲ ಶಾಸ್ತ್ರಿ ಬಾವಿಯ ಹತ್ತಿರ ಬಂದಿದ್ದನು. ನಾನೂ ಹೋಗಿದ್ದೆ. ಆಗ ಅಲ್ಲಿ ನಾನು, ''ಏನು ಶಾಸ್ತ್ರಿಗಳೇ! ನಾನು ಹೇಳಿಕೊಟ್ಟಿದನ್ನು ಸ್ವಲ್ಪವಾದರೂ ಅನುಮಾನ ಹುಟ್ಟದಂತೆ ಸರಿಯಾಗಿ ಹೇಳಿದಿರಿ. ಅಬ್ಬಾ ಏನು ಶಾಸ್ತ್ರವಯ್ಯ ನಿನ್ನದು!'' ಎಂದು ಹೇಳಿದೆ. ಶಾಸ್ತ್ರಿ, ''ಏನನ್ನು ನೀನು ಹೇಳಿದ್ದು? ಶಾಸ್ತ್ರಾಧಾರದಿಂದ ಕಂಡುಹಿಡಿಯ ಬಹುದಾದಿಗದ್ದುದನ್ನೇ ನೀನು ಹೇಳಿದಿ. ನೀನು ಹೇಳದಿದ್ದರೂ ನಾನೇ ಕಂಡುಹಿಡಿದು ಹೇಳುತ್ತಿದ್ದೆ. ನೀನೆಲ್ಲೊ ಸ್ವಲ್ಪ ಹೇಳಿದಿ; ನಾನೆಷ್ಟು ಹೇಳಿದೆ ನೋಡು?'' ಎಂದು ಉತ್ತರಕೊಟ್ಟನು. ಇದೆ ಅಲ್ಲವೆ ಯೋಗ್ಯರ ನಡತೆ?

ಮೊನ್ನೆಯ ದಿನ ರಂಗಪ್ಪ ನನ್ನನ್ನು ಔತಣದ ಊಟಕ್ಕೆ ಕರೆಯಲು ಬಂದಿದ್ದ. ನಾನು. ''ಈ ದಿನ ಏನಯ್ಯ?'' ಎಂದು ಕೇಳಿದೆ.

''ಶ್ಯಾಮ ಹುಟ್ಟಿದ ಹಬ್ಬ; ಅವನಿಗೆ ಮೂರು ವರ್ಷತುಂಬಿತು''.

''ಶ್ಯಾಮ ಎನ್ನುವ ಹೆಸರು ಚೆನ್ನಾಗಿಲ್ಲ, ನಾನು ಕರಿಯಗಾಣದ ತುಂಡಿನಂತೆ ಇದೇನೆ. ನನ್ನ ಹೆಸರನ್ನು ತೆಗೆದುಕೊಂಡು ಹೋಗಿ ಆ ಚಿನ್ನದ ಕೊಳಗದಂತಿರುವ ಮಗುವಿಗೆ ಇಟ್ಟು ಏನು ಮಾಡಿದಿರಿ? ನೀನು ಸರಿಯೆ : ನಿನ್ನ ರತ್ನಳೂ ಸರಿಯೆ. ಶುದ್ಧ ಹುಡುಗು ಸಹವಾಸ ! ಸರಿ, ಸರಿ, ಇಂಗ್ಲೀಷು ಪದ್ಧತಿಗಳೇ ಹೀಗೆ ! ನಿನ್ನ ಹೆಂಡತಿ ಎಂಟು ತಿಂಗಳು ಗರ್ಭಿಣಿಯಾಗಿದ್ದರೆ, ನಿಮ್ಮಮ್ಮನ ಜತೆಗೆ ಅಡಿಗೆ ಮಾಡುವವರಾರು?''

''ಅಕ್ಕನೂ ಅಮ್ಮನೂ ಕೂಡ ಬಂದಿದಾಳೆ.''

ಊಟಕ್ಕೆ ಹೋಗಿದ್ದೆನು. ಹೋದಾಗ ಶ್ಯಾಮ ಇದುರಿಗೆ ಬಂದು ನನ್ನ ಕಾಲುಗಳನ್ನು ಅಪ್ಪಿಕೊಂಡ. ನಾನು ಅವನ ಗಲ್ಲದ ಮೇಲೆ ಒಂದು ಮುತ್ತನ್ನು ಕೊಟ್ಟು, ಅವನ ಕೋಮಲಾಂಗುಲಿಗೆ ಒಂದುಂಗುರವನ್ನಿಟ್ಟೆನು.

ಸ್ವಾಮಿ ! ತಮ್ಮ ದಾಸನಿಗೆ ಇನ್ನು ಅಪ್ಪಣೆ ಕೊಡುವಿರಾ? ನಾನೇನೋ ನಿಮ್ಮ ಸೇವೆಗೆ ಯಾವಾಗಲೂ ಸಿದ್ಧನಾಗಿಯೇ ಇರುವೆನು. ಬೇಸರವಿಲ್ಲವಷ್ಟೆ?

(* ಇಂಗ್ಲೀಷರಲ್ಲಿ ಮಕ್ಕಳಾದರೆ, ಇಷ್ಟರಾದವರನ್ನು ಕರೆದು ಅವರಲ್ಲೊಬ್ಬರ ಹೆಸರನ್ನು ಮಗುವಿಗೆ ಇಡುವುದ ಪದ್ಧತಿ.)

ಕೃಪೆ : ಮಾಸ್ತಿಯವರ ಸಣ್ಣಕತೆಗಳ ಸಂಗ್ರಹದಿಂದ

## ಶಿಕ್ಷಣ - ಮಾಧ್ಯಮ

(ಪುಟ 9ರಿಂದ)

ಪತ್ರಿಕೆಗಳಲ್ಲಿ ಒಂದನ್ನು ಇಂಗ್ಲೀಷ್ ಸಾಹಿತ್ಯ ಎಂಬ ಹೆಸರಿನಲ್ಲಿ ಮೀಸಲಾಗಿರಿಸಿ ಪ್ರಾದೇಶಿಕ ಭಾಷೆಯಲ್ಲಿ ಪಾಠ ಹೇಳಿ ಉತ್ತರ ಬರೆಯುವಂತೆ ಮಾಡಿದರೆ ನಮ್ಮ ಮಕ್ಕಳಿಗೆ ಇಂಗ್ಲೀಷ್ ಭಾಷೆಯ ಹೊರೆಯನ್ನು ತಪ್ಪಿಸುವುದರ ಜೊತೆಗೆ ಇಂಗ್ಲೀಷ್ ಸಾಹಿತ್ಯದ ರಸಾಮೃತವನ್ನು ಪಾನ ಮಾಡಿಸಿದಂತಾಗಿ, ಅವರ ಪುಷ್ಟಿ ಈಗಿರುವುದಕ್ಕಿಂತಲೂ ನೂರ್ಮಡಿ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಇಂಗ್ಲೀಷ್ ಹೋದರೆ ಎಲ್ಲ ಕೊಚ್ಚಿ ಹೋಗುತ್ತದೆ ಎನ್ನುವವರಿಗೆ ಒಂದು ಸಮಾಧಾನ ಹೇಳಬೇಕಾಗುತ್ತದೆ. ಇಂಗ್ಲೀಷ್ ಸಂಪೂರ್ಣವಾಗಿ ಹೋಗುವುದಿಲ್ಲ. ಹಲವರಲ್ಲಿ ಸಾಹಿತ್ಯವಾಗಿ ಉಳಿದರೆ, ಕೆಲವರಲ್ಲಿ ಭಾಷೆಯಾಗಿ ಉಳಿದಿರುತ್ತದೆ. ಇಂಗ್ಲೀಷ್ ಕಲಿಯದ ಇತರ ಬಹುಜನರಿಗೂ ಯಾವ ತರದ ಭಾವ ನಷ್ಟವಾಗಲೀ, ಬುದ್ಧಿ ದಾರಿದ್ರ್ಯವಾಗಲೀ ಸಂಭವಿಸುವುದಿಲ್ಲ.

ಭಾರತದಲ್ಲಿ ಪ್ರಾದೇಶಿಕ ಭಾಷೆ ಬಳಸಿ ರಾಷ್ಟ್ರದ ಜನತೆಗೆ ಮಹದುಪಕಾರ ಮಾಡುತ್ತಿದ್ದೇವೆಂದು ಯಾರೂ ಭಾವಿಸಬೇಕಾಗಿಲ್ಲ. ಇದು ನೂರಾರು ಅಧಿಕಾರಿಗಳ ಪ್ರಶ್ನೆಯೂ ಅಲ್ಲ ಅಥವಾ ಕೆಲಸಕ್ಕೆ ಸೇರಿಕೊಳ್ಳ ಬಯಸುವವರ ಪ್ರಶ್ನೆಯೂ ಅಲ್ಲ. ಇದು ಕೋಟಿ ಕೋಟಿ ಜನ ಸಾಮಾನ್ಯರ ಅನುಕೂಲದ ಪ್ರಶ್ನೆಯೆಂಬುದನ್ನು ನಾವು ಬೇಗ ಅರಿಯಬೇಕು.

# ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಪತ್ರಿಕಾ ಮಾಧ್ಯಮಗಳ ಪಾತ್ರ

- ಸುಮಾದ್ವಾರಕಾನಾಥ್

ಪತ್ರಿಕೋದ್ಯಮದ ಒಂದು ಸಿಂಹಾವಲೋಕನದಲ್ಲಿ ಕಂಡು ಬರುವ ಅಂಶಗಳು

N-North, E- East, W - West, S- South ಹೀಗೆ ಎಲ್ಲಾ ದಿಕ್ಕಿನ ಸಂಗತಿಗಳನ್ನು ಸಾರುವುದೇ ಸುದ್ದಿಯೆಂದರೂ, ನ್ಯೂ ಅಂದರೆ ಹೊಸದಾಗಿರುವುದು ಎಂದರ್ಥದಲ್ಲಿ ಬಳಸಬೇಕು. ಇಂದಿನ ಹೊಸ ಸುದ್ದಿ - ನಾಳಿನ ಹಳಸು, ತಂಗಳು.

As dead as yesterday's news paper. ಯಾವುದು ಕುತೂಹಲ ಕೆರಳಿಸಿ ಆಸಕ್ತಿ ಸೆರೆ ಹಿಡಿದು, ನಮಗೇನಾದರೂ ಹೇಳುವುದೋ ಅದೇ ಸುದ್ದಿ. ಪತ್ರಿಕೆಯ ಕೆಲಸ Inform, Education, Entertainment ತಿಳುವಳಿಕೆ, ಶಿಕ್ಷಣ, ಮನರಂಜನೆ ಎನ್ನುತ್ತಾರೆ.

ವೃತ್ತ ಪತ್ರಿಕೆ ಇಂದು ನಮ್ಮ ಜೀವನದ ಅವಿಭಾಜ್ಯ ಅಂಗ. ವಿವಿಧ ಪ್ರಕಾರದ ಸಮೂಹ ಸಂವಹನ ಮಾಧ್ಯಮಗಳಲ್ಲಿ ಸುಲಭ ಮತ್ತು ಅಷ್ಟೇ ವೇಗದಲ್ಲಿ ಜನರಿಗೆ ತಲುಪುವಂತಹುದು ಪತ್ರಿಕಾ ಮಾಧ್ಯಮ. ಪ್ರತಿಶತ 67ರಷ್ಟು ಅನಕ್ಷರಸ್ಥರಾಗಿರುವ ನಮ್ಮ ದೇಶದಲ್ಲಿ ಪತ್ರಿಕೆಗಳ ಮೂಲಕ ಜನ ಸಮೂಹಕ್ಕೆ ತಲುಪುವ ಪ್ರಸಾರಗೊಳ್ಳುವ ಸಮಾಚಾರ ಬಹು ಜನರಿಗೆ ಕೇವಲ ಸುದ್ದಿಯಾಗಿರದೆ ಸತ್ಯ ಸಂಗತಿಯಾಗಿರುತ್ತದೆ.

ಭಾರತೀಯ ಪತ್ರಿಕೋದ್ಯಮದ ಪ್ರಾರಂಭದ ಆಶಾಕಿರಣಗಳು 18ನೇ ಶ.ದ ಕೊನೆಯಿಂದಲೇ ಕಾಣಲು ಪ್ರಾರಂಭವಾಯಿತು. ಭಾರತೀಯ ಪತ್ರಿಕಾಲೋಕವನ್ನು ಪ್ರಾರಂಭಿಸಿದ ಕೀರ್ತಿ ಎರಡು ಗುಂಪುಗಳಿಗೆ ಸೇರುತ್ತದೆ. ಅನಧಿಕೃತ ವ್ಯಾಪಾರಿಗಳಾಗಿದ್ದು ತಮ್ಮ ವ್ಯಾಪಾರಾಭಿವೃದ್ಧಿಗಾಗಿ ಸರ್ಕಾರದ ಹಿಡಿತವಿಲ್ಲದ ಸ್ವತಂತ್ರ ವ್ಯಾಪಾರ ಪದ್ಧತಿ ಬರಬೇಕೆಂದು ಕೇಳಲು, ಹೋರಾಟ ಸಾಗಿಸಲು ಪತ್ರಿಕೆಗಳನ್ನು ಪ್ರಾರಂಭಿಸಿದವರು ಮೊದಲನೆ ಗುಂಪಿಗೆ ಸೇರಿದವರು. ಸಮಾಜದ ಸುಧಾರಣೆಯ ಉದ್ದೇಶದಿಂದ ಆಡಳಿಗಾರರ ಮೇಲೆ ಪ್ರಭಾವಬೀರುವ ದೃಷ್ಟಿಯಿಂದ ಪತ್ರಿಕೆಗಳನ್ನು ಪ್ರಾರಂಭಿಸಿದವರು ಎರಡನೆಯ ಗುಂಪಿಗೆ ಸೇರಿದವರು.

ಜೇಮ್ಸ್ ಆಗಸ್ಟಸ್ ಹಿಕ್ಕೆ ಕ್ರಿ.ಶ. 1780ರ ಜನವರಿ 29ರಂದು ಕಲ್ಕತ್ತಾದಲ್ಲಿ ಮುದ್ರಿಸಿ ಪ್ರಕಟಿಸಿದ 'The Bengal Gezette ಅಥವಾ 'The Calcutta General Advertise' ಎನ್ನುವುದೇ ಭಾರತದಲ್ಲಿ ಅಚ್ಚಾದ ಪ್ರಥಮ ವೃತ್ತ ಪತ್ರಿಕೆ ಇಂದು ದಿನ ಪತ್ರಿಕೆ, ವಾರ ಪತ್ರಿಕೆ, ಪಾಕ್ಷಿಕ, ಮಾಸಿಕ, ದ್ವೈಮಾಸಿಕ, ತ್ರೈಮಾಸಿಕ ವಾರ್ಷಿಕ ಹೀಗೆ ಪತ್ರಿಕಾ ಪ್ರಕಟಣೆಯ ಗಾತ್ರ ಮೀರಿದ್ದರೂ ಭಾರತದ ಪ್ರಮುಖ ವಾರ್ತಾ ಸಂಸ್ಥೆಗಳು ನಾಲ್ಕು, P.T.I. ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ, U.N.I. ಯುನೈಟೆಡ್ ನ್ಯೂಸ್ ಇಂಡಿಯಾ, ಸಮಾಚಾರ ಭಾರತಿ ಮತ್ತು ಹಿಂದೂಸ್ಥಾನ್ ಸಮಾಚಾರ್.

ಅನೇಕರಿಗೆ ಪತ್ರಿಕಾ ಲೋಕವೆಂದರೆ, ದಿನವೂ ಅಚ್ಚಾಗಿ ಬರುವ ದಿನ ಪತ್ರಿಕೆಗಳೆಂದು ತಿಳಿದುಕೊಂಡಿದ್ದಾರೆ. ದಿನ ಪತ್ರಿಕೆಗಳು ಪ್ರಭಾವವನ್ನು ಬೀರುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದರೂ ಅವು ಪತ್ರಿಕಾಲೋಕದ ಒಂದು ಭಾಗ ಮಾತ್ರ. ಪ್ರಚಲಿತ ಸಮಾಚಾರಗಳನ್ನು ತಿಳಿಸುವ ಪ್ರಕಟಣೆಗಳಿಗೆ ಸಾಮಾನ್ಯವಾಗಿ ವೃತ್ತ ಪತ್ರಿಕೆ ಎಂದು ಕರೆಯಲಾಗುತ್ತದೆ. ಸಂಕೀರ್ಣ ಪತ್ರಿಕೆಗಳು, ವಿಮರ್ಶೆಗಳು ಮತ್ತು ಇತರ ಪತ್ರಿಕೆಗಳ ಪ್ರಕಟಣೆಗಳನ್ನು ನಿಯತಕಾಲಿಕ ಪತ್ರಿಕೆ ಎಂದು ಕರೆಯಲಾಗುತ್ತದೆ. ಪತ್ರಿಕಾಲೋಕವು ಬಳಸಿದ ಅನೇಕ ಸಾಧನಗಳನ್ನು ಸಾಮಾನ್ಯವಾಗಿ ಪತ್ರಿಕೋದ್ಯಮ ಅಥವಾ ಪತ್ರಿಕೋದ್ಯೋಗ ಎಂಬ ಹೆಸರಿನಲ್ಲಿ ಕರೆಯುತ್ತೇವೆ.

ಎಲ್ಲ ನಿಚ್ಚಳ ಸುದ್ದಿಗಳನ್ನು ಸಂಗ್ರಹಿಸಿ, ವಿವಿಧ ಮೂಲಗಳಿಗೆ ತಲುಪಿ ಮಾಹಿತಿ ಪಡೆಯುವುದು, ನಡೆದ ಘಟನೆಗಳ ಹಿನ್ನೆಲೆ ಗ್ರಹಿಸುವುದು, ದೊರೆತ ಸಮಾಚಾರಗಳ ಸತ್ಯಾಸತ್ಯತೆಯನ್ನು ವಿಶ್ಲೇಷಿಸುವುದು, ಆ ಬಳಿಕ ದೊರೆತ ಸುದ್ದಿಯನ್ನು ವಸ್ತು ನಿಷ್ಠ ದೃಷ್ಟಿಕೋನದಿಂದ ಪತ್ರಿಕೆಗಳಿಗೆ ವರದಿಮಾಡುವುದು ಹೀಗೆ ವೃತ್ತ ಪತ್ರಿಕೆಯ ಕ್ರಿಯಾಶೀಲತೆ ಒಂದು ನಿರ್ದಿಷ್ಟ ಗತಿಯಲ್ಲಿ ಮುಂದುವರೆಯುವುದನ್ನು ಕಾಣುತ್ತೇವೆ.

ಭಾರತದಲ್ಲಿ ಪತ್ರಿಕೆಗಳು ಒಂದು ಸಂಸ್ಥೆಯಾಗಿ ಬೆಳೆದುಕೊಂಡು ಬಂದಿದೆ. ಸಮಾಜದ ಒಂದು ಸಂಸ್ಥೆಯಾದ ಪತ್ರಿಕಾಲೋಕವು, ಸಾರ್ವಜನಿಕ ಸುದ್ದಿ ಪ್ರಸಾರದ ಕರ್ತವ್ಯವಾಗಿ ಕೆಲಸ ಮಾಡುತ್ತದೆ. ಪ್ರಸಾರ ಮಾರ್ಗವು ಜ್ಞಾನಾಭಿವೃದ್ಧಿಯ ಒಂದು ಅವಶ್ಯಕವಾದ ಸಾಧನ. ವಾಸ್ತವಿಕವಾಗಿ ನೋಡಿದರೆ ಪತ್ರಿಕಾ ವ್ಯವಸಾಯವು ಒಂದು ಖಾಸಗಿ ಉದ್ಯಮವಾದರೂ ಸಾರ್ವಜನಿಕ ಸೇವೆಯ ಪ್ರತೀಕವಾಗಿದೆ. ಆಧುನಿಕ ಪತ್ರಿಕಾ ಲೋಕವು ಭಾರತಕ್ಕೆ ಪಶ್ಚಿಮದ ಕೊಡುಗೆಯಾದರೂ ಭಾರತೀಯ ಜೀವನದಲ್ಲಿ ಹೊಂದಿಕೊಂಡು ಬೆಳೆದು ರಾಷ್ಟ್ರದ ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಜೀವನದಲ್ಲಿ ಶ್ರೇಷ್ಠ ಪಾತ್ರ ವಹಿಸುತ್ತಿದೆ. ವೃತ್ತ ಪತ್ರಿಕಾ ಲೋಕವು ಪ್ರಜಾ ಪ್ರಭುತ್ವ ರಾಜ್ಯ ಪದ್ಧತಿಯ ರಕ್ಷಾ ಕವಚ. ಸ್ವತಂತ್ರವಾದ ಮತ್ತು ಉಚ್ಛ್ರಾಯ ಸ್ಥಿತಿಯಲ್ಲಿರುವ ವೃತ್ತ ಪತ್ರಿಕಾಲೋಕವು ಜನತೆಯ ಹಕ್ಕು ಬಾಧ್ಯತೆಗಳನ್ನು ಕಾಪಾಡುವ ಮುಖ್ಯ ಸಾಧನ. ತನ್ನ ಸ್ವಶಕ್ತಿಯಿಂದಲೇ ಒಂಟಿಯಾಗಿ ಹೋರಾಡುವ ಪತ್ರಿಕಾ ಲೋಕವು ತನ್ನ ಅಭ್ಯುದಯ ಮಾತ್ರವಲ್ಲ; ಇತರರ ಅಭ್ಯುದಯಕ್ಕೂ ಹೋರಾಡುತ್ತದೆ. ಜನತಾ ಚಳವಳಿಯ ಮುಖ್ಯ ಸಾಧನವಾಗಿ ಪತ್ರಿಕಾಲೋಕವು ಹೋರಾಟದ ಯುದ್ಧ ಭೂಮಿಯಲ್ಲಿ ಮುಂದಿನ ಸಾಲಿನಲ್ಲಿ ನಿಂತು ಸರ್ವತ್ಯಾಗಕ್ಕೂ ಸಿದ್ಧವಾಗಿರುತ್ತದೆ. ಪತ್ರಿಕಾಲೋಕದ ಮಹತ್ವವನ್ನು ಜನತೆಯು ಅರಿತುಕೊಂಡು ಜನಸಾಮಾನ್ಯರ ಹಕ್ಕು ರಕ್ಷಣೆಗಳನ್ನು ಸುರಕ್ಷಿತವಾಗಿ ಕಾಪಾಡುವ ಆಯುಧವು ಪತ್ರಿಕಾಲೋಕ ಎಂಬುದನ್ನು ಮನನ ಮಾಡಿಕೊಳ್ಳಬೇಕು. ಪ್ರಜಾಪ್ರಭುತ್ವ ರಾಜ್ಯ ಪದ್ಧತಿಯ ಯಶಸ್ಸು ಅಥವಾ ಅವನತಿಗೆ ಪತ್ರಿಕಾಲೋಕವು ಕಾರಣವಾಗಬಲ್ಲುದು. ಆದ್ದರಿಂದಲೇ ವೃತ್ತ ಪತ್ರಿಕಾ ಲೋಕವನ್ನು ರಾಷ್ಟ್ರಾಡಳಿತದ ನಾಲ್ಕನೇ ಅಂಗವೆಂದು ಕರೆಯುತ್ತಾರೆ.

ಪೂರ್ವ ದೇಶದ ಸಂಸ್ಕೃತಿಯ ನಾಣ್ಣುಡಿಯೊಂದರ ಪ್ರಕಾರ ಏಷ್ಯಾ ದೇಶದರಾಜರು, ಮಹಾರಾಜರು ಅಕ್ಬರನ ಶಕ್ತಿಗಿಂತ ಅಬ್ದುಲ್ ಫಜಲ್‌ನ ಲೇಖನಿಗೆ ಹೆದರಿದ್ದರು ಎಂಬ ಪ್ರತೀತಿ ಇದೆ.

ಸ್ವಾಭಾವಿಕವಾಗಿ ಪತ್ರಿಕಾ ಲೋಕವು ಯುದ್ಧ ಮತ್ತು ಶಾಂತಿ ಕಾಲಗಳೆರಡರಲ್ಲಿಯೂ ತುಂಬಾ ಗಂಭೀರವಾದ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಸಾವಿರ ಯುದ್ಧ ಸೈನಿಕರನ್ನು ಎದುರಿಸುವುದಕ್ಕಿಂತ ಹೆಚ್ಚಾಗಿ, ಕೇವಲ ನಾಲ್ಕು ವಿರೋಧ ಮಾಡುವ ಪತ್ರಿಕೆಗಳನ್ನು ಎದುರಿಸಲು ಹೆದರಬೇಕಾಗುತ್ತದೆ ಎಂಬುದನ್ನು ಸಾಮ್ರಾಟ್ ನೆಪೋಲಿಯನ್ನನೇ ಒಪ್ಪಿಕೊಂಡಿದ್ದಾನೆ.

ವೃತ್ತ ಪತ್ರಿಕೆಗಳ ಪ್ರಸರಣ ಸಂಖ್ಯೆ ಜಗತದಲ್ಲಿ ಪಾಲುಗೊಳ್ಳುವ ಅಂಶಗಳು ಮೂರು. 1) ಸಾಕ್ಷರತೆ, ನಗರೀಕರಣ, 2) ಮುದ್ರಣ ತಂತ್ರದ ವಿಜ್ಞಾನ ಮುನ್ನಡೆ, 3) ದಿನೇ ದಿನೇ ಬೆಳೆಯುತ್ತಿರುವ ಸಂಪರ್ಕ ಸಾಧನ. ಬಾನುಲಿ ದೂರದರ್ಶನ ಮತ್ತು ದೂರ ಸಂವಹನಗಳ ವಿಸ್ತೃತ ಜಾಲ, ಕ್ಷಣಾರ್ಧದಲ್ಲಿ ಇಡೀ ಪ್ರಪಂಚವನ್ನು ಭಾವನಾತ್ಮಕ ಸ್ಪಂದನೆಗೆ ಅಣಿಗೊಳಿಸುತ್ತದೆ. ಪತ್ರಿಕೆಯ ವಿಷಯಗಳನ್ನು ವರದಿ ಮಾಡುವುದರ ಜೊತೆಗೆ ರಾಜಕೀಯ ವಿಷಯಗಳ ಬಗ್ಗೆ ತರ್ಕ ಬದ್ಧವಾಗಿಯೂ, ವಿವೇಚನಾ ಪೂರ್ವಕವಾಗಿಯೂ ಟೀಕೆಮಾಡುತ್ತದೆ. ಹೊಸ ಯೋಜನೆಗಳನ್ನು ಪ್ರಸ್ತಾಪ ಮಾಡುತ್ತದೆ. ಹೀಗೆ ಮಾಡಿ ಸರ್ಕಾರದ ರೀತಿ, ನೀತಿಗಳ ಮೇಲೂ ಮತ್ತು ಕೃತಿಗಳ ಮೇಲೂ ಪ್ರಭಾವವನ್ನು ಬೀರುತ್ತದೆ. ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವುದರಲ್ಲಿ ಸಹಾಯ ಮಾಡುತ್ತದೆ. ಸುಧಾರಣೆಗಳು ಕಾರ್ಯರೂಪಕ್ಕೆ ಬರಲು ಪತ್ರಿಕಾ ಟೀಕೆಗಳು ಸಹಾಯ ಮಾಡುತ್ತದೆ. ಸಾರ್ವಜನಿಕರ ಮನಸ್ಸಿನ ಮೇಲೆ ಪತ್ರಿಕಾಭಿಪ್ರಾಯಗಳನ್ನು ಮೇಲಿಂದ ಮೇಲೆ ಒತ್ತುವುದರ ಮೂಲಕ, ಪತ್ರಿಕೆಗಳು ಅನೇಕ ವೇಳೆ ಅಂತರ ರಾಷ್ಟ್ರೀಯ ರಾಜಕೀಯ ಗತಿಯನ್ನು ನಿರ್ಧರಿಸುತ್ತದೆ. ಪ್ರಪಂಚದ ಆಗುಹೋಗುಗಳಲ್ಲಿ ಪ್ರತಿಯೊಬ್ಬ ಮನುಷ್ಯನೂ ಭಾಗವಹಿಸುವಂತೆ ಮಾಡುವುದೇ ಪತ್ರಿಕೆಯ ಮುಖ್ಯ ಉದ್ದೇಶ. ಜಗತ್ತಿನಲ್ಲಿ ನಡೆಯುವ ಆಂದೋಳನದ ಬಗ್ಗೆ, ವಿಷಯಗಳನ್ನು ತಿಳಿಸಿ ಶಿಕ್ಷಣ ಕೊಡುವ ಕರ್ತವ್ಯ ಪತ್ರಿಕೆಯದಾಗಿರುತ್ತದೆ.

ಸಾರ್ವಜನಿಕ ಜೀವನದ ಮೇಲೆ ಪತ್ರಿಕೆಯು

ಪ್ರಭಾವವನ್ನು ಮೀರುವಷ್ಟು ಇನ್ನಾವ ಸಾಧನವೂ ಪರಿಣಾಮವನ್ನುಂಟು ಮಾಡುವುದಿಲ್ಲ. ಪತ್ರಿಕೆಯ ಪ್ರಭಾವವು ಎಷ್ಟು ವಿಸ್ತಾರವಾದದ್ದೋ ಅಷ್ಟೇ ಆಳವಾಗಿರುತ್ತದೆ.

ಪತ್ರಿಕೆಗಳು ಪ್ರಪಂಚದ ಕೈಗನ್ನಡಿ, ಮೂಲತಃ ಪತ್ರಿಕೆಗಳು ಸ್ವತಂತ್ರವಾಗಿರಬೇಕು. ಪತ್ರಿಕಾ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ಊರುಗೋಲು. ಭಾರತದಲ್ಲಿ ಇತ್ತೀಚೆಗೆ ಓದುಗರಲ್ಲಿ ಪತ್ರಿಕೆಗಳನ್ನು ಓದುವ ಅಭ್ಯಾಸವು ಹೆಚ್ಚಾಗುತ್ತಿದ್ದು ಒಂದು ನೂತನ ಅಧ್ಯಾಯವನ್ನೇ ಪ್ರಾರಂಭಮಾಡಿದೆ. ಇತ್ತೀಚಿನ ವರ್ಷಗಳಲ್ಲಿ ಪತ್ರಿಕೆಗಳು ವಾರ್ತಾ ಪ್ರಸಾರದ ಮತ್ತು ಜಾಹೀರಾತಿನ ಮುಖ್ಯ ಸಾಧನಗಳಾಗಿವೆ.

ಪತ್ರಿಕೆಯ ಮುಖ್ಯ ಜವಾಬ್ದಾರಿಯು ಸರ್ಕಾರಕ್ಕಲ್ಲದೆ ಜನತೆಗಿರುತ್ತದೆ. ಸರ್ಕಾರದ ಆಡಳಿತ ಪಕ್ಷವು ಯಾವ ರಾಜಕೀಯ ಪಕ್ಷಕ್ಕೆ ಸೇರಿದ್ದರೂ ಪತ್ರಿಕಾ ಲೋಕದ ಮುಖ್ಯ ಗುರಿ ಜನತೆಯ ಸೇವೆ. ಆದ್ದರಿಂದ ಇವರೆಡರ ನಡುವೆ ಮಧುರ ಬಾಂಧವ್ಯವನ್ನು ಕಲ್ಪಿಸಬೇಕು.

ಭಾರತದ ಸಂವಿಧಾನದಲ್ಲಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಪ್ರತ್ಯೇಕ ಸ್ಥಾನವಿಲ್ಲ. ಅಭಿಪ್ರಾಯ ಪ್ರಕಟಣೆಯಲ್ಲಿಯೇ ಪತ್ರಿಕಾ ಸ್ವಾತಂತ್ರ್ಯವನ್ನು ಸೇರಿಸಲಾಗಿದೆ. ಸುತ್ತು ಕಡೆಯಿಂದ ಆಕ್ರಮಣ ನಡೆಸುವ ಕಾನೂನುಗಳು ಇವೆಯೇ ಹೊರತು ರಕ್ಷಣೆ ನೀಡುವ ಒಂದು ಕಾನೂನು ಇಲ್ಲ. ಮಧ್ಯಮ ಜನತೆಗೆ ಸತ್ಯ ಅಸತ್ಯಗಳ ಒಳಿತು ಕೆಡುಕುಗಳ ಅರಿವು ಮಾಡಿಕೊಡಬೇಕು. ಸ್ವತಂತ್ರವಾದ ರೀತಿಯಲ್ಲಿ ಆಲೋಚನೆ ಮಾಡುವಂತೆ ಜನರಿಗೆ ಪ್ರೇರಣೆ ನೀಡಬೇಕು ಮತ್ತು ಜವಾಬ್ದಾರಿ ರೂಪಿಸುವಲ್ಲಿ ನಿರ್ಭೀತವಾಗಿ ಮುನ್ನಡೆಯಬೇಕು. ಆಗ ಮಾತ್ರ ಪ್ರಜಾಪ್ರಭುತ್ವಕ್ಕೆ ಒಂದು ಅರ್ಥ ಬರುತ್ತದೆ. ನಾಗರಿಕ ರಾಷ್ಟ್ರೀಯ ಪ್ರಜ್ಞೆ ಬೆಳೆಸಿಕೊಂಡು ಸಂವಿಧಾನದತ್ತ ಮೂಲಭೂತ ಹಕ್ಕುಗಳನ್ನು ಪಡೆಯುವಂತಾಗಬೇಕಾದರೆ ಪತ್ರಿಕೆಯಂತ ಸಂವಹನ ಮಾಧ್ಯಮದ ಹೊಣೆ ನಿರಂತರ ಪ್ರಸ್ತುತ.

ನಮ್ಮ ದೇಶದಲ್ಲಿಯ ಪತ್ರಿಕೆಗಳು ಜನತೆಯ ಆಶೆ ಆಕಾಂಕ್ಷೆಗಳನ್ನು ಎಷ್ಟರ ಮಟ್ಟಿಗೆ ಧ್ವನಿಸುತ್ತವೆ ಮತ್ತು ಪತ್ರಿಕೆಗಳ ವರದಿ ಲೇಖನಗಳಿಗೆ ಸಾರ್ವಜನಿಕರು ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ ಎಂಬುದರ ಮೇಲೆಯೇ ಭಾರತೀಯ ಪತ್ರಿಕಾ ಪ್ರಪಂಚದ ಸ್ವರೂಪ ಮತ್ತು ಭವಿಷ್ಯ ಅವಲಂಬಿಸಿದೆ.

ಪ್ರತಿಯೊಂದು ದೇಶದಲ್ಲಿ ಪ್ರತ್ಯೇಕವಾಗಿ ನೀತಿ ಸಂಹಿತೆಯ ರಚನೆಯ ಪ್ರಯತ್ನ ನಡೆದಿರುವಂತೆಯೇ ಅಂತರ ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಪತ್ರಿಕಾ ಸಂಘಟನೆಗಳು ಎಲ್ಲಾ ದೇಶಗಳ ವೃತ್ತಿ ನಿರತರಿಗೂ ಅನ್ವಯವಾಗುವ ಸಾಮಾನ್ಯ ನೀತಿ ಸಂಹಿತೆಯನ್ನು ರೂಪಿಸುವ ಪ್ರಯತ್ನಗಳು ನಡೆಸಿವೆ. ಇಂಥ ಸಂಹಿತೆಗಳು ಬೇರೆ ಬೇರೆ ದೇಶಗಳು ಪ್ರತ್ಯೇಕವಾಗಿ ರಚಿಸಿರುವ ಸಂಹಿತೆಗಳ ಬಹುಪಾಲು ಅಂಶಗಳನ್ನು ಒಳಗೊಂಡಿರುವುದನ್ನು ಕಂಡರೆ ದೇಶ ಯಾವುದೇ ಇರಲಿ, ಭಾಷೆ ಯಾವುದೇ ಇರಲಿ ಎಲ್ಲ ಕಡೆ ಪತ್ರಕರ್ತರ ವೃತ್ತಿ ಧರ್ಮದ ಆಶಯಗಳು ಒಂದೇ ಆಗಿರುವುದನ್ನು ಸಮರ್ಥಿಸುತ್ತವೆ.

ಸಂವಹನ ಜಾಲದಲ್ಲಿ ಉಪಗ್ರಹಗಳ ಪ್ರವೇಶ ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾದ ಸೌಲಭ್ಯವನ್ನು ಒದಗಿಸಿದೆ. ಅನೇಕ ಸುದ್ದಿ ಸಂಸ್ಥೆಗಳು ಈ ಸೌಲಭ್ಯಗಳ ಬಳಕೆಯಿಂದಾಗಿ ವಿಶ್ವವ್ಯಾಪಿಯಾಗಿ ಕಾರ್ಯ ಮಾಡುತ್ತಿದ್ದು ಪರಸ್ಪರ ಸುದ್ದಿ ಸಮಾಚಾರ ತಂತ್ರ ಜ್ಞಾನಗಳ ವಿನಿಮಯದಲ್ಲಿ ಪ್ರಗತಿ ಪರ ಧೋರಣೆಗಳನ್ನು ಅನುಸರಿಸುತ್ತಿವೆ. ಎಲೆಕ್ಟ್ರಾನಿಕ್ ಕ್ರಾಂತಿ, ವರದಿಗಾರರಿಗೆ ಮತ್ತು ಸುದ್ದಿ ಸಂಸ್ಥೆಗಳಿಗೆ ಒಂದು ಬಗೆಯ ಆಹ್ವಾನವೂ ಆಗಿದೆ.


## ಉತ್ತರ ಭಾರತ ಪ್ರವಾಸಗಳು
## Tours to Historical/ Religious Places

| | Route | Frequency | Fare | |
|---|---|---|---|---|
| 1) | Delhi – Yamunotri – Gangotri – Badrinath – Kedarnath – Delhi | 1st/ 3rd Friday | 6,500/- | ** |
| 2) | Delhi – Badrinath – Kedarnath – Delhi | Every Mon/Fri | 4,200/- | ** |
| 3) | Delhi – Agra – Allahabad –Varanasi – Gaya – Ayodhya – Delhi | 1st/ 3rd Saturday | 5700/- | ** |
| 4) | Delhi – Shimla – Kullu – Manali – Chandigarh – Delhi | Every Friday | 3,500/- | * |
| 5) | Delhi – Manali – Dalhousie – Vaishnodevi – Amritsar – Chandigarh – Delhi | Every Monday | 5,000/- | * |
| 6) | Delhi – Jaipur – Fathepur Sikri – Agra – Mathura – Delhi (Golden Triangle Tour) | Every Mon/Friday | 1,100/- | * |
| 7) | Delhi – Mussoorie – Haridwar – Rishikesh – Delhi | Every Tue/Friday | 1,200/- | * |

**We are authorised to run L.T.C. Tours by India Tourism Development Corporation (ITDC) to employees working in various departments of Government of India and Central Government undetakings.**

** **Includes vegetarian food enroute, transport, accommodation & Guide Service**

* **Includes non A/c room accommodation on twin sharing basis by non A/c coach.**

We are running LFC Tours for all banks/ LIC employees. All the above tours are by Super Deluxe buses, starting from our New Delhi office.

Also contact for tours to South India & hotel accommodation bookings all over India

**Contact Our Offices for Advance Reservations :** Bangalore – 2226 2633; Hyderabad – 2330 7658; Vizag – 2745565; Vijaywada – 576624& Chennai – 2538 5253

ನೀವು ದಿಲ್ಲಿಗೆ ಬಂದಾಗ ಅತ್ಯಾಧುನಿಕ ಸೌಕರ್ಯಗಳೊಂದಿರುವ ನೂರಾರು ರೂಮ್‌ಗಳಿರುವ ಹೋಟೆಲ್ ಸದರನ್‌ನಲ್ಲಿ ವಸತಿ ತೆಗೆದುಕೊಳ್ಳಿ. ರುಚಿಯಾದ ಕರ್ನಾಟಕ ಮತ್ತು ಆಂಧ್ರದ ವಿವಿಧ ವ್ಯಂಜನಗಳು ನಮ್ಮ ಹೋಟೆಲ್‌ನಲ್ಲಿರುವ ರೆಸ್ಟೋರೆಂಟ್‌ಗಳಲ್ಲಿ ಸಿಗುವುದು.

**HOTEL SOUTHERN / SOUTHERN TRAVELS PVT. LTD.**

(Recognised by Ministry of Tourism, Govt. of India)

(ದೆಹಲಿಯಲ್ಲಿರುವ ದಕ್ಷಿಣ ಭಾರತದ ಪ್ರಮುಖ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿದೆ.)

**Head Office: 18/2, Arya Samaj Road, Karol Bagh, New Delhi – 110 005**
**Ph. 2572 2210,2 573 9508 • Fax: 011-2575 1308 • E-mail: southern@del2.vsnl.net.in**

**Branch Office: F-38, Dadar Manish Market, Senapati Bapat Marg, Dadar (West), Mumbai – 400 028**
**Ph: 2432 6895, 2432 6688 • Fax: 2432 6688 • E-mail: southerntravels@vsnl.com**

No. TECH/47-202/MBI/2003-05
Date of Posting : 10-09-2004

# ಭವ್ಯ ಭಾರತ ನಮ್ಮೆಲ್ಲರ ನೆಲೆ
# ಸ್ವಾತಂತ್ರ್ಯೋತ್ಸವ ನಮಗೆಲ್ಲ ಸ್ಫೂರ್ತಿಯ ಸೆಲೆ

ಭಾರತದ ಸ್ವಾತಂತ್ರ್ಯೋತ್ಸವ ಎಂದರೆ ಸತ್ಯ, ಅಹಿಂಸೆ, ಸಹಿಷ್ಣುತೆಗಳಂತಹ ಹಲವು ಉದಾತ್ತ ತತ್ವಗಳತ್ತ ನಮ್ಮೆಲ್ಲರ ಗಮನ ಸೆಳೆಯುವುದರೊಂದಿಗೆ ಅವುಗಳನ್ನು ಪರಿಪಾಲಿಸುವಂತೆ ಸದಾ ಪ್ರೇರಣೆ ಒದಗಿಸುವ ಅತ್ಯಪೂರ್ವ ಅವಕಾಶ.

**ಸಮೃದ್ಧ ಕರ್ನಾಟಕ ಸದೃಢ ಹೆಜ್ಜೆ**

- ಕೃಷಿ - ಕೃಷಿ ವಲಯಕ್ಕೆ ಉತ್ತೇಜನ ನೀಡಲು 412 ಕೋಟಿ ರೂ.ಗಳ ಯೋಜನಾ ಅನುದಾನ 840 ಕೋಟಿ ರೂ.ಗಳಿಗೆ ಹೆಚ್ಚಳ.
- ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಬೆಂಬಲಕ್ಕಾಗಿ 100 ಕೋಟಿ ರೂ.ಗಳ ಆವರ್ತನಿಧಿ.

**ಗ್ರಾಮೀಣಾಭಿವೃದ್ಧಿ**

- ಗ್ರಾಮೀಣ ಜನತೆಯ ಬದುಕಿಗೆ ಹೊಸ ಚೇತನ ನೀಡಲು ರೂ. 690 ಕೋಟಿಗಳ ಜಲಾನಯನ ಯೋಜನೆ. ರೂ. 670 ಕೋಟಿ ವೆಚ್ಚದಲ್ಲಿ ಕೆರೆ ನಿರ್ವಹಣಾ ಯೋಜನೆ ಮತ್ತು ರೂ. 1035.00 ಕೋಟಿ ವೆಚ್ಚದಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆ ಅನುಷ್ಠಾನ.
- ಹಿಂದುಳಿದ ವರ್ಗಗಳ ಸ್ವಯಂ ಉದ್ಯೋಗಕ್ಕಾಗಿ ರೂ. 20 ಕೋಟಿಯೊಂದಿಗೆ ಶ್ರಮ ಶಕ್ತಿ ಯೋಜನೆ.

**ಪ್ರಾಥಮಿಕ ಶಿಕ್ಷಣ**

- ಅಕ್ಷರ ದಾಸೋಹ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿರುವ 7ನೇ ತರಗತಿವರೆಗಿನ ಎಲ್ಲಾ ಮಕ್ಕಳಿಗೂ ವಿಸ್ತರಣೆ. ಹೆಚ್ಚುವರಿಯಾಗಿ 25 ಲಕ್ಷ ಶಾಲಾ ಮಕ್ಕಳು ಫಲಾನುಭವಿಗಳು.
- **ಆರೋಗ್ಯ**
  ಮುಂದಿನ 5 ವರ್ಷಗಳಲ್ಲಿ ರೂ. 765 ಕೋಟಿ ವೆಚ್ಚದಲ್ಲಿ ಆರೋಗ್ಯ ಮತ್ತು ಪೌಷ್ಟಿಕಾಂಶ ಯೋಜನೆಯ ಅನುಷ್ಠಾನ ಸಾರ್ವಜನಿಕ ಆರೋಗ್ಯವರ್ಧನೆ ಮತ್ತು ಆರೋಗ್ಯ ರಕ್ಷಣೆಗೆ ಹೆಚ್ಚಿನ ಸೌಲಭ್ಯ.
- ಯಶಸ್ವಿನಿ ಯೋಜನೆಯ ಮುಂದುವರಿಕೆ ಎಲ್ಲಾ ರೈತರ ಆರೋಗ್ಯ ರಕ್ಷಣೆಗಾಗಿ ಸಂಜೀವಿನಿ ಆರೋಗ್ಯ ವಿಮೆ.
- **ನೀರಾವರಿ**
  ಕೃಷ್ಣಾ ಮೇಲ್ದಂಡೆ ಯೋಜನೆಯಡಿ ವಿವಿಧ ಹಂತದಲ್ಲಿರುವ ಎಲ್ಲಾ ನೀರಾವರಿ ಕಾಮಗಾರಿಗಳು ಡಿಸೆಂಬರ್ 2005ರೊಳಗೆ ಪೂರ್ಣ.
- **ಸಮಾಜಿಕ ಕಲ್ಯಾಣ**
  ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಣ್ಣ ರೈತರಿಗೆ ಮತ್ತಷ್ಟು ಪ್ರೋತ್ಸಾಹ ನೀಡಲು ಗಂಗಾ ಕಲ್ಯಾಣ ಕಾರ್ಯಕ್ರಮದಡಿ ರೂ. 13 ಕೋಟಿಗಳ ಹೆಚ್ಚುವರಿ ಅನುದಾನ.
- ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಯೋಜನಾ ಅನುದಾನದಲ್ಲಿ ಗಮನಾರ್ಹ ಹೆಚ್ಚಳ. ರೂ. 396 ಕೋಟಿಯಿಂದ ರೂ. 435 ಕೋಟಿ ಏರಿಕೆ.
- **ಕನ್ನಡ ಮತ್ತು ಸಂಸ್ಕೃತಿ**
  ಈ ನಾಡಿನ ನೆಲ. ಜಲ ಮತ್ತು ವಿಶಿಷ್ಟ ಸಂಸ್ಕೃತಿಯ ಪಾಲನೆ ಪೋಷಣೆ ಮತ್ತು ಅಭಿವೃದ್ಧಿಗೆ ವಿಶೇಷ ಒತ್ತು. ಐತಿಹಾಸಿಕ ಸ್ಥಳಗಳಾದ ಮೈಸೂರು, ಶ್ರೀರಂಗಪಟ್ಟಣ, ಬೀದರ್, ಬಿಜಾಪುರ, ಗುಲ್ಬರ್ಗಾ ಮತ್ತು ಕಿತ್ತೂರು ಪಟ್ಟಣಗಳನ್ನು ಪರಂಪರೆ ಕೇಂದ್ರಗಳೆಂದು ಘೋಷಿಸಲಾಗುವುದು.
- ಕೂಡಲ ಸಂಗಮ ಮಾದರಿಯಲ್ಲೇ ಬಸವ ಕಲ್ಯಾಣದ ಅಭಿವೃದ್ಧಿಗೆ ಕ್ರಮ.

**ಪ್ರಾದೇಶಿಕ ಅಸಮಾನತೆ ನಿವಾರಣೆಯತ್ತ ದಿಟ್ಟ ಹೆಜ್ಜೆ**

- ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ ಶ್ರೀ ನಂಜುಂಡಪ್ಪ ಸಮಿತಿ ಮಾಡಿರುವ ಶಿಫಾರಸ್ಸುಗಳು ಹಂತಹಂತವಾಗಿ ಜಾರಿ.
- ಉತ್ತರ ಕರ್ನಾಟಕದ ಅಭಿವೃದ್ಧಿ ರೂ. 7,170 ಕೋಟಿಗಳ ಬೃಹತ್ ಯೋಜನಾ ಅನುದಾನ. ಇದು ರಾಜ್ಯದ ಒಟ್ಟಾರೆ ಯೋಜನಾ ಗಾತ್ರದ ಶೇ. 54 ರಷ್ಟು.
- ಉತ್ತರ ಕರ್ನಾಟಕದ ತೀರ ಹಿಂದುಳಿದ 37 ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ.
- ಉತ್ತರ ಕರ್ನಾಟಕವೂ ಸೇರಿದಂತೆ ರಾಜ್ಯದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಅವುಗಳಿಗೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನದ 371ನೇ ವಿಧಿಗೆ ತಿದ್ದುಪಡಿ ತರಲು ಕೇಂದ್ರಕ್ಕೆ ಒತ್ತಾಯ.

**ರಾಷ್ಟ್ರದ ಸಂಪದಭಿವೃದ್ಧಿಯಲ್ಲಿ ನಾವೆಲ್ಲರೂ ಭಾಗಿಗಳು.**

**ಕರ್ನಾಟಕ ವಾರ್ತೆ**

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938

## ಸುಬ್ರಹ್ಮಣ್ಯ ಭಟ್ಟ ಅವರಿಗೆ ಎಂ.ಫಿಲ್ ಪದವಿ

ಹಾಳ್ತಜೆ ಸುಬ್ರಹ್ಮಣ್ಯ ಭಟ್ ಅವರು ಬರೆದು ಸಲ್ಲಿಸಿದ ಎಂ.ಫಿಲ್ ಸಂಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವವಿದ್ಯಾಲಯವು ಅವರಿಗೆ ಕನ್ನಡದಲ್ಲಿ ಎಂ.ಫಿಲ್ ಪದವಿಯನ್ನು ನೀಡಿದೆ.

ಸೇಡಿಯಾಪು ಕಥನ ಸಾಹಿತ್ಯ ಒಂದು ಅಧ್ಯಯನ ಎಂಬ ಸುಬ್ರಹ್ಮಣ್ಯ ಭಟ್ಟ ಅವರ ಸಂಪ್ರಬಂಧಕ್ಕೆ ಎಂ.ಫಿಲ್ ಪದವಿ ದೊರಕಿದ್ದು ಅವರು ಕನ್ನಡ ವಿಭಾಗದ ಮೂಲಕ ಡಾ. ಕೆ. ರಘುನಾಥ ಅವರ ಮಾರ್ಗದರ್ಶನದಲ್ಲಿ ಈ ಸಂಪ್ರಬಂಧವನ್ನು ಸಿದ್ಧ ಪಡಿಸಿದ್ದರು.

ಆಂಗ್ಲ ಮತ್ತು ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅವರು ಪ್ರಸ್ತುತ ಸಹಕಾರಿ ಸಂಸ್ಥೆ ಶ್ಯಾಮ್ಲ್ಯ ದ ಮಂಗಳೂರು ಶಾಲೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ದಕ್ಷಿಣ ಕನ್ನಡದ ಹಿರಿಯ ವಿದ್ವಾಂಸ ಯಕ್ಷಗಾನ ಸಾಹಿತಿ ವಿದ್ವಾನ್ ಹಾಳ್ತಜೆ ಕೃಷ್ಣ ಭಟ್ಟ ಅವರ ಪುತ್ರ.

## ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ

ಇತ್ತೀಚೆಗೆ ನಿಧನರಾದ ಕನ್ನಡದ ಹಿರಿಯ ಸಾಹಿತಿಗಳಿಗೆ ಕಲಾವಿದರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮವನ್ನು ಪುಣೆಯಲ್ಲಿ ಮಹಾರಾಷ್ಟ್ರ ರಾಜ್ಯ ಮಾಧ್ಯಮಿಕ ಹಾಗೂ ಉಚ್ಚ ಮಾಧ್ಯಮಿಕ ಮಂಡಳದ ಕನ್ನಡ ಪಠ್ಯ ಪುಸ್ತಕ ರಚನಾ ಸಮಿತಿಯು ಹಮ್ಮಿಕೊಂಡಿತ್ತು.

ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಯ ಬಣ್ಣ ಬನಿಯನ್ನು ಗಾಢಗೊಳಿಸಿದ ಶತಾಯುಷಿ ನಿಟ್ಟೂರು ಶ್ರೀನಿವಾಸ ರಾವ್, ಹಿರಿಯ ಕನ್ನಡ ಸಾಹಿತಿ ಶಂಕರ ಮೊಕಾಶಿ ಪುಣೇಕರ, ಪರಿಸರವಾದಿ ಚಿಂತಕ ನಿ. ಮುರಾರಿ ಬಲ್ಲಾಳ ಹಾಗೂ ಹಿರಿಯ ಯಕ್ಷಗಾನ ಕಲಾವಿದ ಕೋಟ


TRIMURTI
JEWELLERS
GOLD AND DIAMOND ORNAMENTS

460/4, Venkatesh Niwas,
Ground Floor, Bhaudaji Road,
Opp Mysore Association,
Matunga (C.Rly.) Mumbai-400 019.

Phone : **2402 3485**


## ಸುತ್ತಮುತ್ತ

ವೈಕುಂಠ ಅವರಿಗೆ ಈ ಸಂದರ್ಭದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಂಪಾದಕ ಮಂಡಳದ ಸದಸ್ಯರಾದ ಡಾ. ಕೆ. ರಘುನಾಥ ಅವರು ನಿಟ್ಟೂರು ಅವರ ಸಾಂಸ್ಕೃತಿಕ ಸಾಧನೆಯನ್ನು ಕುರಿತು ಅನೇಕ ವಿಚಾರಗಳನ್ನು ಹಂಚಿಕೊಂಡರು. ಮೊಕಾಶಿ ಹಾಗೂ ಬಲ್ಲಾಳರ ವ್ಯಕ್ತಿತ್ವದ ಅನನ್ಯತೆಯನ್ನು ಕುರಿತು ಮಾತನಾಡಿದರು. ಡಾ. ಸದಾನಂದ ಬಿಳ್ಳೂರವರು ತಾವು ಕೈಕೊಂಡ ಸಂಶೋಧನ ಸಂದರ್ಭದಲ್ಲಿ ನಿಟ್ಟೂರು ಹಾಗೂ ಮೊಕಾಶಿಯವರು ನೀಡಿದ ಪ್ರೋತ್ಸಾಹವನ್ನು ಸ್ಮರಿಸಿದರು. ಅಭ್ಯಾಸ ಮಂಡಳದ ಸದಸ್ಯರಾದ ಡಾ. ಜಿ.ಎನ್. ಉಪಾಧ್ಯ ಅವರು ನಿಟ್ಟೂರು, ಮೊಕಾಶಿ, ಮುರಾರಿ ಬಲ್ಲಾಳರ ವಿಶಿಷ್ಟ ವ್ಯಕ್ತಿತ್ವವನ್ನು ಕುರಿತು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಇದೇ ಸಂದರ್ಭದಲ್ಲಿ ಅಭ್ಯಾಸ ಮಂಡಳದ ಸದಸ್ಯರಾದ ಪ್ರೊ. ಕೆ. ಕೆ. ಪತ್ತಾರ, ಎ. ಎಸ್. ಹೊಸಮನಿ, ಬಿ.ಎಸ್. ಕಾಪಸೆ ಉಪಸ್ಥಿತರಿದ್ದರು.

## ಕವಿಗಳ ಲೋಕಾನುಭೂತಿ ಭಿನ್ನ ಭಿನ್ನ
## ಡಾ. ಸುನೀತಾ ಶೆಟ್ಟಿ

ಪ್ರತಿಯೊಬ್ಬ ಕವಿಯು ತಾನು ಹುಟ್ಟಿ ಬೆಳೆದ ಪರಿಸರದ ಪ್ರಜ್ಞೆಯನ್ನು ತನ್ನ ಕಾವ್ಯದಲ್ಲಿ ಚಿತ್ರಿಸುತ್ತಾನೆ. ಅದರಲ್ಲಿಯೇ ತಾನು ಹೇಳಹೊರಟ ಸಂದೇಶದ ಸಫಲತೆಯನ್ನು ಕಾಣುತ್ತಾನೆ. ಕವಿಗಳ ಲೋಕಾನುಭೂತಿ ಭಿನ್ನ ಭಿನ್ನವಾದುದು'', ಎಂದು ಡಾ॥ ಸುನಿತಾ ಶೆಟ್ಟಿ ಅವರು ಅಭಿಪ್ರಾಯ ಪಟ್ಟರು.

ಅವರು ಇತ್ತೀಚೆಗೆ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಹಿನ್ನಲೆಯಲ್ಲಿ ಮಾತನಾಡುತ್ತಿದ್ದರು. ಅವರು ಮುಂದುವರಿದು, ಹರಿಶ್ಚಂದ್ರ ಕಾವ್ಯದಲ್ಲಿ ನಾಟಕೀಯ ಗುಣ ಪ್ರಕೃತಿಯ ವರ್ಣನೆ ಚಂದ್ರಮತಿ ಪಾತ್ರಚಿತ್ರಣ, ವಸಿಷ್ಠ ಮತ್ತು ವಿಶ್ವಾಮಿತ್ರ ನಡುವಿನ ವಾಗ್ವಾದ ಹರಿಶ್ಚಂದ್ರನ ಬಾಳಿಗೆ ಹೇಗೆ ಮುಳುವಾಯಿತೆಂಬುದನ್ನು ಸವಿಸ್ತಾರವಾಗಿ ವಿವರಿಸುವದರ ಜೊತೆಗೆ ಕೆಲವು ಭಾಗಗಳನ್ನು ಶುಶ್ರಾವ್ಯವಾಗಿ ಹಾಡುವುದರ ಮೂಲಕ ವಿದ್ಯಾರ್ಥಿಗಳನ್ನು ಮಂತ್ರಮುಗ್ಧರನ್ನಾಗಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ಅವರು ಡಾ. ಸುನಿತಾ ಶೆಟ್ಟಿ ಅವರ ವಿಭಾಗದ ಜೊತೆ ಎರಡುವರೆ ದಶಕದ ನಂಟನ್ನು ನೆನಪಿಸಿದರು. ಕಾವ್ಯವನ್ನು ಅರ್ಥೈಸಿಕೊಳ್ಳುವುದರ ಬಗೆ ತಿಳಿಸಿದಲ್ಲದೆ ಇಂತಹ ಉಪನ್ಯಾಸ ಕಾರ್ಯಕ್ರಮಗಳು ಹಲವಾರು ವರ್ಷಗಳಿಂದ ವಿಭಾಗ ಏರ್ಪಡಿಸುತ್ತಾ ಬಂದಿದೆ. ಇದರಿಂದಾಗಿ ವಿದ್ಯಾರ್ಥಿಗಳ ಅನುಮಾನದ ಅಂಚನ್ನು ಮೀರಲು ಸಾಧ್ಯ'' ಎಂದರು.

ಮಹೇಶ್ ಹೆಗ್ಡೆ ಕಾರ್ಯಕ್ರಮ ನಿರೂಪಿಸಿದರು.

ಮಲ್ಲಿಕಾ ರಾವ್, ರಾಜಶ್ರೀ ಇನಾಮದಾರ್ ಪ್ರಾರ್ಥನೆ ಗೀತೆ ಹಾಡಿದರು. ಮೋಹನ್ ಬುಳ್ಳಾರ್ ಉಪನ್ಯಾಸಕರನ್ನು ಪರಿಚಯಿಸಿದರು. ಮರಿಯಪ್ಪ ನಾಟೇಕರ್ ವಂದಿಸಿದರು.

## ದಿಲ್ಲಿಯಲ್ಲಿ ಕೃಷ್ಣ ಶರ್ಮರ ಜನ್ಮ ಸತಾಬ್ದಿ
## ಸಾಹಿತ್ಯ ಪ್ರಚಾರಕ್ಕೆ ಕರೆ

ಕರ್ನಾಟಕದ ಪ್ರಖ್ಯಾತ ಸಾಹಿತಿ, ಪತ್ರಕರ್ತ, ಸ್ವಾತಂತ್ರ್ಯ ಹೋರಾಟಗಾರ, ಸಂಘಟಕ ದಿವಂಗತ ಸಿದ್ದವನಹಳ್ಳಿ ಕೃಷ್ಣ ಶರ್ಮರ ಜನ್ಮ ಶತಮಾನೋತ್ಸವವನ್ನು ದಿಲ್ಲಿಯಲ್ಲಿ ಆ. 8ರಂದು ಅದ್ದೂರಿಯಿಂದ ಆಚರಿಸಿದರು.

ಶತಮಾನೋತ್ಸವವನ್ನು ಉದ್ಘಾಟಿಸಿದ 'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರು 120ಕ್ಕೂ ಹೆಚ್ಚು ಹೆಚ್ಚು ಕೃತಿಗಳನ್ನು ಬರೆದ ಕೃಷ್ಣ ಶರ್ಮರು ಕೃಷ್ಣಾವತಾರ, ಗೀತಾ ಪ್ರವಚನ ಮುಂತಾದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಕನ್ನಡಿಗರಲ್ಲಿ ಹೊಸ ಚೈತನ್ಯ ತುಂಬಿದರು 'ವಿಶ್ವ ಕರ್ನಾಟಕ' ಪತ್ರಿಕೆ ಬೆಳೆಸಿದ ಶರ್ಮರ ಬಿರುಸಿನ ಬರಹಗಳು ಕನ್ನಡಿಗರಿಗೆ ಸ್ಫೂರ್ತಿ ನೀಡಿ ರಾಷ್ಟ್ರ ಸೇವೆಗೆ ಸಜ್ಜುಗೊಳಿಸಿದವರೆಂದರು. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸ್ವಾತಂತ್ರ್ಯ ಹೋರಾಟಕ್ಕಿಳಿದ ಶರ್ಮರು ಗಾಂಧಿ - ಸರ್ವೋದಯ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಚಾರಗೊಳಿಸಿದರೆಂದ ಸಾಮಗ ಅವರು ಶರ್ಮರ ಬದುಕಿನಿಂದ ಕನ್ನಡಿಗರು ಸ್ಫೂರ್ತಿಗೊಂಡು ಅನುವಾದ ಸಾಹಿತ್ಯವನ್ನು ಇನ್ನಷ್ಟು ಬೆಳೆಸಿ ಬೇಕೆಂದರು.

ಲೇಖಕಿ ಡಾ. ಶಕುಂತಲಾ ದವೆಸರ್ ಅವರು ಶರ್ಮರ 'ಪರ್ಣಕುಟಿ' ಕನ್ನಡದ ಶ್ರೇಷ್ಠ ಗದ್ಯ ಕೃತಿಯಾಗಿದ್ದರೂ ಅದರಲ್ಲಿ ಕನ್ನಡ ಕಾವ್ಯದ ಸ್ವರ ಮಿಡಿಯುತ್ತಿದೆ ಎಂದರು.


**MATRIMOINAL**

Kannada bride, smart, 5.3" fair complexion, M.B.B.S. working in a private hospital in Bangalore. Nakshatra Ashwini, gotra Vishwamita, Seeking for Post graduate doctor or engineer in United Kingdom. Contact : Mr. S. Sumanth, 234, 6th Main Jayanagar, 4th Block, Bangalore - 560 011.
Ph. 080 - 2664 3609
Email -chandrashekarvs@yahoo.co.in

***

Alliance invited for Kannada Smartha Bramin Boy, Vashishta Gotra, Pubba Nakshtra. 6 feet, fair, handsome & Smart; B.Com., M.B.A. Astt. Manager, VAS, MNC Mumbai. Seeking for M.B.A. is preferred Height above 5'5" Smart social with modern outlook from a good family back ground

Contract : Lr. Col. S. Prakash
Ph. (080) 26594781